KACM010001992016

Presented on : 07-01-2016
Registered on : 07-01-2016

IN THE COURT OF
PRL. DISTRICT AND SESSIONS JUDGE.CHIKMAGALUR
AT Chikmagalur,CHIKMAGALUR
(Presided Over by SHUBHA GOWDAR)
SPL.C/1/2016

Complainant(PROSECUTION):
State by- Karnataka Lokayuktha Police, Chikkamagaluru.

VERSUS

Accused: Sri. Channabasappa, So. Ambaraya Makale, aged 50 years, Executive Officer, Taluk Panchayath Office, Mudigere, Chikkamagaluru District, R/o Nasiravadi Village, Kasaba Hobli, Alanda Taluk, Kalaburgi District.

State Complainant}: Spl. Public Prosecutor,
Advocate for accused K.S.SHANTHIPRAKASH

Offence punishable under : U/Sec.13(1)(E)r/w13(2)ofPCAct1988.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ಚಿಕ್ಕಮಗಳೂರು

ವಿಶೇಷ ಪ್ರಕರಣ ಸಂಖ್ಯೆ: 01/2016

ಪ್ರಾ.ಸಾ.- 30
ಚಾ.ಸಾ.- 107

ಸಾಕ್ಷಿದಾರರ ಹೆಸರು	:	ಪ್ರಸನ್ನ ವಿ ರಾಜು
ತಂದೆಯ ಹೆಸರು	:	ಕೇಶವ ರಾಜು
ವಯಸ್ಸು	:	49 ವರ್ಷ
ಉದ್ಯೋಗ	:	ನಿವೃತ್ತ ಡಿಎಸ್‌ಪಿ
ವಾಸ ಸ್ಥಳ	:	ಚೆನ್ನೈ

ದಿನಾಂಕಃ 17-02-2020
ಪ್ರಮಾಣ ವಚನದ ನಂತರ

ಃ ಮುಖ್ಯ ವಿಚಾರಣೆಃ ಅಭಿಯೋಜನೆ ಪರ ಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

1. ದಿನಾಂಕಃ 16-10-2012 ರಿಂದ 09-10-2013 ರವರೆಗೆ ನಾನು ಚಿಕ್ಕಮಗಳೂರಿನ ಲೋಕಾಯುಕ್ತ ಕಚೇರಿಯಲ್ಲಿ ಡಿಎಸ್‌ಪಿಯಾಗಿ ಕೆಲಸ ನಿರ್ವಹಿಸಿದ್ದೇನೆ.

2. ದಿನಾಂಕಃ 21-03-2013 ರಂದು ಎಸ್.ಪಿ. ಲೋಕಾಯುಕ್ತ, ಹಾಸನ, ಇವರು ತಮ್ಮ ಕಛೇರಿಗೆ ಬರಲು ಹೇಳಿದಂತೆ, ನಾನು ಆ ದಿನ ಬೆಳಿಗ್ಗೆ 7.45 ಗಂಟೆಗೆ ಅವರ ಕಛೇರಿಯಲ್ಲಿ ಇದೆ. ಬೆಳಿಗ್ಗೆ ಸುಮಾರು 8.00 ಗಂಟೆ ಸಮಯಕ್ಕೆ ಎಸ್.ಪಿ.ಯವರು ಸೋರ್ಸ್ ರಿಪೋರ್ಟ್ ಮತ್ತು ಎಸ್.ಪಿ.ಕಛೇರಿಯ ನಡಾವಳಿಯನ್ನು ನನಗೆ ಕೊಟ್ಟರು, ಅದನ್ನು ಸ್ವೀಕರಿಸಿದೆ. ಸೋರ್ಸ್ ರಿಪೋರ್ಟನ್ನು ಈಗ ನೋಡುತ್ತಿದ್ದು, ಅದಕ್ಕೆ ನಿ.ಪಿ.77 ಎಂದು ಗುರುತಿಸಲಾಯಿತು. ಅದರಲ್ಲಿರುವ ಸಾಕ್ಷಿಯ ಸಹಿಗೆ ನಿ.ಪಿ. 77(ಎ) ಎಂದು ಗುರುತಿಸಲಾಯಿತು. ನಡಾವಳಿಯನ್ನು ನೋಡುತ್ತಿದ್ದು, ಅದಕ್ಕೆ ನಿ.ಪಿ.78 ಎಂದು ಗುರುತಿಸಲಾಯಿತು. ನಿ.ಪಿ. 77 ರ ಪ್ರಕಾರ ಆರೋಪಿ ತನ್ನ ಗೊತ್ತಿದ್ದ ಆದಾಯಕ್ಕಿಂತ ಶೇಕಡಾ 174.12 ರಷ್ಟು ಹೆಚ್ಚು ಆದಾಯ ಹೊಂದಿದ್ದಾನೆ ಅಂದರೆ ಆತನ ನಿಗಧಿತ ಆದಾಯಕ್ಕಿಂತ ರೂ.50,49,562/-ರಷ್ಟು ಹೆಚ್ಚು ಮೊತ್ತದ ಆಸ್ತಿ ಅವನ ಬಳಿ ಇದೆ ಎಂದು ವರದಿಯಲ್ಲಿ ಕಾಣಿಸಲಾಗಿತ್ತು. ಅದನ್ನು ಪಡೆದುಕೊಂಡು ನಾನು ಚಿಕ್ಕಮಗಳೂರಿನ ಲೋಕಾಯುಕ್ತ ಕಛೇರಿಗೆ ಬಂದೆ. ನಿ.ಪಿ.77 ರ ಆದಾ,ರದಿಂದ ನಮ್ಮ ಠಾಣೆಯ ಪ್ರಕರಣ ಸಂ. 4/2013 ರಲ್ಲಿ ಪ್ರಕರಣವನ್ನು ಪಿ.ಸಿ. ಕಾಯ್ದೆ ಕಲಂ.13(1)(ಇ) ಸಹ

ಕಲಂ.13(2)ರ ಅಡಿಯಲ್ಲಿ ಪ್ರಕರಣವನ್ನು ನೊಂದಾಯಿಸಿದ್ದೇನೆ. ಪ್ರ.ವ.ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ಅದನ್ನು ಈಗ ನೋಡುತ್ತಿದ್ದೇನೆ, ಅದಕ್ಕೆ ನಿ.ಪಿ.79 ಎಂದು ಗುರುತಿಸಲಾಯಿತು. ಪ್ರ.ವ.ವರದಿಯಲ್ಲಿ ನನ್ನ ಸಹಿ ಇದ್ದು, ಅದಕ್ಕೆ ನಿ.ಪಿ.79(ಎ) ಎಂದು ಗುರುತಿಸಲಾಯಿತು.

3. ದಿನಾಂಕಃ 21-03-2013 ರಂದು ಮಾನ್ಯ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿ, 4 ಶೋಧನಾ ವಾರೆಂಟನ್ನು ಕೊಡಬೇಕೆಂದು ಅರ್ಜಿಯನ್ನು ಕೊಟ್ಟಿದ್ದೆ. ಅದರಲ್ಲಿ 1 ನೇ ವಾರೆಂಟನ್ನು ಗುಲ್ಬರ್ಗದಲ್ಲಿರುವ ದತ್ತ ಕಾಲೋನಿಯ ಆರೋಪಿಯ ವಾಸದ ಮನೆ ಶೋಧನೆ ವಾರೆಂಟ್ ಆಗಿದ್ದು, ಅದನ್ನು ಶೋಧನೆ ಮಾಡಲು ಕೆ.ಟಿ. ಗುರುರಾಜ್ ಎನ್ನುವ ಪಿ.ಐ. ಲೋಕಾಯುಕ್ತ, ಚಿಕ್ಕಮಗಳೂರು ಇವರ ಹೆಸರಿನಲ್ಲಿ ಕೊಡಲು ವಿನಂತಿಸಿದ್ದೆ. 2 ನೇ ವಾರೆಂಟನ್ನು ಆಳಂದ ತಾಲ್ಲೂಕಿನ ನಾಸರ್ ವಾಡಿ ಗ್ರಾಮದ ಆರೋಪಿಯ ವಾಸದ ಮನೆಯನ್ನು ಶೋಧನೆ ಮಾಡಲು, ಶೋಧನೆ ವಾರೆಂಟ್ ಆಗಿದ್ದು, ಅದನ್ನು ಶೋಧನೆ ಮಾಡಲು ತಿಮ್ಮರಾಯ ಆರ್ ಪಾಟೀಲ ಎನ್ನುವ ಪಿ.ಐ. ಲೋಕಾಯುಕ್ತ, ಗುಲ್ಬರ್ಗ ಇವರ ಹೆಸರಿನಲ್ಲಿ ಕೊಡಲು ವಿನಂತಿಸಿದ್ದೆ. 3 ನೇ ವಾರೆಂಟನ್ನು ಬೆಂಗಳೂರಿನ ನಾಗಶೆಟ್ಟಿಹಳ್ಳಿ ಪ್ರದೇಶದಲ್ಲಿರುವ ಅಪಾರ್ಟ್ ಮೆಂಟ್‌ನಲ್ಲಿ ಫ್ಲ್ಯಾಟ್ ನಂ. 2/8,ಬಿ-ಬ್ಲಾಕ್ ಈ ಮನೆಯನ್ನು ಶೋಧನೆ ಮಾಡಲು, ವಿನಯ್ ಎನ್ನುವ ಪಿ.ಐ. ಲೋಕಾಯುಕ್ತ, ಚಿಕ್ಕಮಗಳೂರು ಇವರ ಹೆಸರಿನಲ್ಲಿ ಕೊಡಲು ವಿನಂತಿಸಿದ್ದೆ. 4 ನೇ ವಾರೆಂಟನ್ನು ಆರೋಪಿಯು ವಾಸವಾಗಿದ್ದ ಮೂಡಿಗೆರೆಯಲ್ಲಿಯ ಮನೆ ಮತ್ತು ಕಛೇರಿಯ ಶೋಧನೆ ಮಾಡಲು ಶೋಧನೆ ವಾರೆಂಟ್ ಆಗಿದ್ದು, ಅದನ್ನು ಶೋಧನೆ ಮಾಡಲು ನನಗೆ ಕೊಡುವಂತೆ ವಿನಂತಿಸಿದ್ದೆ. ನಾನು ಕೊಟ್ಟಂತಹ ಅರ್ಜಿಯನ್ನು ನೋಡುತ್ತಿದ್ದು,

ಅದಕ್ಕೆ ನಿ.ಪಿ. 80 ಎಂದು ಗುರುತಿಸಲಾಯಿತು, ಅದರಲ್ಲಿರುವ ಸಾಕ್ಷಿಯ ಸಹಿಗೆ ನಿ.ಪಿ. 80(ಎ) ಎಂದು ಗುರುತಿಸಲಾಯಿತು. ನನ್ನ ಕೋರಿಕೆಯಂತೆ ಮಾನ್ಯ ನ್ಯಾಯಾಲಯ ವಾರೆಂಟನ್ನು ಹೊರಡಿಸಿದೆ.

4. ಮೇಲೆ ಹೇಳಿದ 3 ವಾರೆಂಟ್ ಗಳನ್ನು ಅದನ್ನು ಯಾರ ಹೆಸರಿನಲ್ಲಿ ಪಡೆದುಕೊಂಡಿದ್ದೆನೋ ಅವರವರಿಗೆ ಕಳುಹಿಸಿಕೊಟ್ಟು, ಸದರಿಯವರಿಗೆ ದಂ. ಪ್ರ.ಸಂ.ಕಲಂ.165 ರ ಅಡಿಯಲ್ಲಿ ಸೂಚನೆ ಕೊಟ್ಟು, ಅವರ ಮನೆಯನ್ನು ಶೋಧಿಸಿ, ಮಹಜರ್ ಮುಖೇನ ಅವಶ್ಯಕತೆ ಇದ್ದಲ್ಲಿ ಅಮಾನತ್ತುಪಡಿಸಲು ಮಾಹಿತಿ ಕೊಟ್ಟು, ಅವರನ್ನು ಕಳುಹಿಸಿದೆ. ಮಹಜರ್ ಸಮಯದಲ್ಲಿ ಅವಶ್ಯಕತೆ ಇದ್ದ ಸಾಕ್ಷಿದಾರರನ್ನು ಪಡೆದುಕೊಳ್ಳಲು ಅವರಿಗೆ ಸೂಚನೆ ನೀಡಿದೆ.

5. ನಾನು ಶೋಧನೆ ಸ್ಥಳಕ್ಕೆ ಹೋಗುವ ಉದ್ದೇಶಕ್ಕಾಗಿ ಇಬ್ಬರು ಸಾಕ್ಷಿದಾರರನ್ನು ಕರೆದುಕೊಂಡು ಬರುವಂತೆ ನನ್ನ ಸಹಾಯಕರಿಗೆ ಸೂಚಿಸಿ, ಆ ಬಗ್ಗೆ ಕೆ ಎಸ್ ಆರ್ ಟಿ ಸಿ ಯ ಅಸಿಸ್ಟೆಂಟ್ ಟ್ರಾಫಿಕ್ ಸೂಪರಿಂಟೆಂಡ್ ಇವರಿಗೆ ಕಳುಹಿಸಿ, ಒಬ್ಬರು ಪಂಚರನ್ನು ಕಳುಹಿಸಿಕೊಡುವಂತೆ ವಿನಂತಿಸಿದ್ದೆ. ಸಹಾಯಕ ಉಪ ವಿಭಾಗಾಧಿಕಾರಿಗಳ ಕಛೇರಿ, ಇವರಿಗೆ ಪತ್ರ ಬರೆದು, ಅವರ ಕಛೇರಿಯಿಂದಲೂ ಸಹಾ ಒಬ್ಬ ಸಿಬ್ಬಂದಿಯನ್ನು ಸಾಕ್ಷಿಯಾಗಿ ಕಳುಹಿಸಿಕೊಡುವಂತೆ ವಿನಂತಿಸಿದೆ. ಶ್ರೀಮತಿ ಬೇಬಿ ಬಾಯಿ ಎನ್ನುವ ಕೆ ಎಸ್ ಆರ್ ಟಿ ಸಿಯಲ್ಲಿ ಟ್ರಾಫಿಕ್ ಇನ್ಸ್ ಪೆಕ್ಟರ್ ಆಗಿ ಕೆಲಸ ಮಾಡುವ ಒಬ್ಬರನ್ನು ಕೆ ಎಸ್ ಆರ್ ಟಿ ಸಿ ಅಸಿಸ್ಟೆಂಟ್ ಟ್ರಾಫಿಕ್ ಸೂಪರಿಂಟೆಂಡ್ ಇವರು ಕಳುಹಿಸಿಕೊಟ್ಟಿದ್ದರು. ಅದರಂತೆ ಅನುಪ್.ಎಸ್.ಸಿ. ಎನ್ನುವ ಪ್ರ.ದ.ಸ. ಇವರನ್ನು ಸಹಾಯಕ ಉಪ ವಿಭಾಗಾಧಿಕಾರಿಗಳ ಕಛೇರಿ, ಚಿಕ್ಕಮಗಳೂರು, ಇವರು ಕಳುಹಿಸಿಕೊಟ್ಟಿದ್ದರು, ಅವರಿಬ್ಬರೂ ಆ ದಿನ ಸಂಜೆ 4.00 ಗಂಟೆಗೆ ನಮ್ಮ ಕಛೇರಿಗೆ ಬಂದು ಹಾಜರಾದರು. ಅವರಿಗೆ ಮರುದಿನ ಬೆಳಿಗ್ಗೆ 5.00 ಗಂಟೆಗೆ ನಮ್ಮ ಕಛೇರಿಗೆ

ಬಂದು ಹಾಜರಾಗುವಂತೆ ಸೂಚಿಸಿ, ಕಳುಹಿಸಿಕೊಟ್ಟೆ.

6. ದಿನಾಂಕಃ22-03-2013 ರಂದು ಬೆಳಿಗ್ಗೆ 5.00 ಗಂಟೆಗೆ ಇಬ್ಬರು ಪಂಚರು ನನ್ನ ಮುಂದೆ ಹಾಜರಾದರು. ಕ್ರೈಂ ನಂ. 4/2013 ನ್ನು ಅವರಿಗೆ ತಿಳಿಸಿದೆ. ಸದರಿ ಪ್ರಕರಣದಲ್ಲಿ ನಾವು ದಾಳಿಗಾಗಿ ಹೋಗಬೇಕಾಗಿದೆ, ದಾಳಿಯ ಸಂದರ್ಭದಲ್ಲಿ ನೀವು ಪಂಚರಾಗಿ ಹಾಜರಿರಬೇಕೆಂದು ಅವರಿಗೆ ತಿಳಿಸಿದೆ, ಅದಕ್ಕೆ ಅವರು ಒಪ್ಪಿಕೊಂಡರು. ಇಲಾಖಾ ವಾಹನದಲ್ಲಿ ನಾನು, ಸಿಬ್ಬಂದಿಗಳು, ಹಾಗೂ ಸಾಕ್ಷಿದಾರರು ಸೇರಿ ನಮ್ಮ ಕಛೇರಿಯಿಂದ ಮೂಡಿಗೆರೆಯ ತಾಲ್ಲೂಕು ಪಂಚಾಯ್ತಿ ಕಛೇರಿಗೆ ಹೋದೆವು. ಅಲ್ಲಿಗೆ ತಲುಪಿದಾಗ ಬೆಳಿಗ್ಗೆ 6.00 ಗಂಟೆ ಆಗಿತ್ತು. ಆರೋಪಿ ಮೂಡಿಗೆರೆ ಕಛೇರಿಗೆ ಬಂದು, ಸುಮಾರು 3 ತಿಂಗಳಾಗಿತ್ತು. ಆತ ಎಲ್ಲಿ ಇರುತ್ತಾನೆ ಎನ್ನುವ ಬಗ್ಗೆ ನನಗೆ ಮಾಹಿತಿ ಇರಲಿಲ್ಲ. ನಾನು ನಮ್ಮ ಬಾತ್ಮಿದಾರರಿಗೆ ಆರೋಪಿ, ಕಛೇರಿಗೆ ಎಷ್ಟು ಗಂಟೆಗೆ ಬರುತ್ತಾನೆ ಎನ್ನುವ ಬಗ್ಗೆ ಮಾಹಿತಿ ಕೇಳಿದೆ, ಆಗ ಬಾತ್ಮಿದಾರರು ಆರೋಪಿ ತನ್ನ ಕಛೇರಿಯ ಪಕ್ಕದಲ್ಲಿ ಖಾಲಿ ಇರುವ ವಸತಿ ಗೃಹದಲ್ಲಿ ವಾಸ ಮಾಡಿಕೊಂಡಿದ್ದಾನೆ ಎನ್ನುವ ಮಾಹಿತಿ ಕೊಟ್ಟರು ಹಾಗೂ ಸಾಮಾನ್ಯವಾಗಿ ಬೆಳಿಗ್ಗೆ 9.00 ಗಂಟೆಗೆ ಆತ ಕಛೇರಿಗೆ ಬರುತ್ತಾನೆ ಎಂದು ಮಾಹಿತಿ ಕೊಟ್ಟರು. ಆಗ ನಾನು, ಸಿಬ್ಬಂದಿಗಳು ಮತ್ತು ಪಂಚರು ಆರೋಪಿ ವಾಸವಾಗಿದ್ದ ಆತನ ಕಛೇರಿ ಪಕ್ಕದಲ್ಲಿದ್ದ ವಸತಿ ಗೃಹಕ್ಕೆ ಹೋದೆವು. ನಮ್ಮ ಸಿಬ್ಬಂದಿಯಾದ ಧರ್ಮೇಗೌಡ ಎನ್ನುವವನಿಗೆ ಆರೋಪಿ ಮನೆಯ ಕರೆಗಂಟೆಯನ್ನು ಒತ್ತುವಂತೆ ಸೂಚಿಸಿದೆ. ಅದರಂತೆ ಆತ ಕರೆಗಂಟೆ ಒತ್ತಿದ, ಆಗ ಒಬ್ಬರು ಬಂದು ಬಾಗಿಲನ್ನು ತೆರೆಯುತ್ತಾರೆ. ನಾವು ಆತನನ್ನು ನೀವು ಯಾರು ಎಂದು ಕೇಳಿದಾಗ, ಆತ ತನ್ನ ಹೆಸರು ಚನ್ನಬಸಪ್ಪ ಎಂದು ಪರಿಚಯಿಸಿಕೊಂಡ. ಅದರಂತೆ ನಾನು, ನಮ್ಮ ಗುರುತಿನ ಚೀಟಿಯನ್ನು ತೋರಿಸಿ ನನ್ನನ್ನು ಪರಿಚಯಿಸಿಕೊಂಡೆ. ಪಂಚರ ಗುರುತಿನ ಚೀಟಿಯನ್ನು ಅವರಿಗೆ

ತೋರಿಸಿ, ಅವರನ್ನು ಪರಿಚಯಿಸಿಕೊಂಡೆ. ಕೋರ್ಟ್‌ನಿಂದ ಕೊಟ್ಟಂತರ ಶೋಧನಾ ವಾರೆಂಟನ್ನು ಆರೋಪಿಗೆ ಓದಿ ಹೇಳಿ, ಅದಕ್ಕೆ ಆತನ ಸಹಿಯನ್ನು ಪಡೆಯಲಾಯಿತು. ಸದರಿ ವಾರೆಂಟಿಗೆ ಪಂಚರು ಸಹಿ ಮಾಡಿದ್ದು, ನಾನೂ ಸಹಾ ಸಹಿ ಮಾಡಿದ್ದೇನೆ. ಅದನ್ನು ಈಗ ನೋಡುತ್ತಿದ್ದು, ಅದಕ್ಕೆ ನಿ.ಪಿ. 81 ಎಂದು ಗುರುತಿಸಲಾಯಿತು, ಅದರಲ್ಲಿ ನನ್ನ, ಆರೋಪಿಯ, ಮತ್ತು ಪಂಚರ ಸಹಿಗಳು ಇರುತ್ತವೆ. ಅದರಲ್ಲಿರುವ ಸಾಕ್ಷಿಯ ಸಹಿಗೆ ನಿ.ಪಿ. 81(ಎ) ಎಂದು ಗುರುತಿಸಲಾಯಿತು, ಅದರಲ್ಲಿ ಆರೋಪಿ ಮಾಡಿದ ಸಹಿಗೆ ನಿ.ಪಿ. 81(ಬಿ) ಎಂದು ಗುರುತಿಸಲಾಯಿತು.

7. ಆರೋಪಿ ವಾಸವಾಗಿದ್ದ ವಸತಿ ಗೃಹವನ್ನು ಶೋಧಿಸುವ ಮೊದಲು ನಾನು, ಸಿಬ್ಬಂದಿಗಳು, ಪಂಚರು ಅಂಗಶೋಧನೆ ಮಾಡಿಕೊಂಡೆವು, ನಂತರ ವಸತಿ ಗೃಹವನ್ನು ಶೋಧಿಸಲಾಯಿತು. ಮನೆಯಲ್ಲಿ ಕಂಡು ಬಂದ ಎಲ್ಲಾ ವಸ್ತುಗಳ ವಿವರಗಳನ್ನು ಬರೆದು, ಪಂಚರ ಸಮಕ್ಷಮ ಆರೋಪಿಯನ್ನು ಕೇಳಿ ಅದರ ಅಂದಾಜು ಬೆಲೆಯನ್ನು ಬರೆಯಲಾಯಿತು. ಆರೋಪಿ 7 ಗ್ರಾಂ ತೂಕದ ಚಿನ್ನದ ಸರವನ್ನು ಹಾಕಿಕೊಂಡಿದ್ದ, ಆತನ ಕೈಯಲ್ಲಿ ಚಿನ್ನದ ಒಂದು ಉಂಗುರ ಇದ್ದು, ಅದರ ತೂಕ 5 ಗ್ರಾಂ ಆಗುತ್ತಿತ್ತು. ಅದರ ಬೆಲೆ ಎಷ್ಟು ಎಂದು ಕೇಳಿದಾಗ ಅವೆರಡೂ ಸೇರಿ ರೂ. 35,580/- ಆಗುತ್ತಿತ್ತು ಎಂದು ಆರೋಪಿ ಹೇಳಿದ್ದಾನೆ. ಆರೋಪಿಯ ವಸತಿ ಗೃಹದಲ್ಲಿ ರೂ.41,140/-ನಗದು ಹಣ ಇತ್ತು. ಅದನ್ನು ಪಂಚರ ಸಮಕ್ಷಮ ಲೆಕ್ಕ ಮಾಡಿ, ಆರೋಪಿಗೆ ಮರಳಿ ನೀಡಲಾಯಿತು. ಚಿನ್ನದ ಸರ ಮತ್ತು ಉಂಗುರನ್ನು ಆತನಿಗೆ ಮರಳಿ ನೀಡಲಾಯಿತು. ಬೆಂಗಳೂರಿನಿಂದ ಶೋಧನಾ ವಾರೆಂಟನ್ನು ಪಡೆದುಕೊಂಡು ಹೋಗಿದ್ದ ವಿನಯ್ ನನಗೆ ಫೋನ್ ಮಾಡಿ, ಸದರಿ ಫ್ಲ್ಯಾಟಿನ ಬೀಗ ಹಾಕಿದ್ದು, ಬೀಗ ಆರೋಪಿ ಬಳಿ ಇದೆ ಎಂದು ಹೇಳಿದ್ದರು, ಅದರಂತೆ ನಾನು ಆರೋಪಿಯನ್ನು ಕೇಳಿದಾಗ ತನ್ನ ಬಳಿ ಫ್ಲ್ಯಾಟಿನ

ಬೀಗ ಇದೆ ಎಂದು ಹೇಳಿದ್ದಾನೆ.

8. ಮನೆಯ ಶೋಧನೆ ಮುಗಿದ ನಂತರ ಆರೋಪಿ ಕೆಲಸ ಮಾಡುತ್ತಿದ್ದ ಕಛೇರಿಗೆ ಹೋದೆವು. ಆತನ ಕಛೇರಿಯನ್ನು ಶೋಧನೆ ಮಾಡುವಾಗ ಕಛೇರಿಯ ವ್ಯವಸ್ಥಾಪಕರು ಬಂದಿದ್ದರು. ಸದರಿ ವ್ಯವಸ್ಥಾಪಕರು, ಆರೋಪಿ ಮತ್ತು ಪಂಚರ ಸಮಕ್ಷಮ ಆರೋಪಿಯ ಕಛೇರಿಯನ್ನು ಶೋಧಿಸಲಾಯಿತು. ಆತನ ಕಛೇರಿಯಲ್ಲಿ ಆರೋಪಿಗೆ ಸೇರಿದ ಬೆಲೆಬಾಳುವ ವಸ್ತುಗಳು ಅಥವಾ ದಾಖಲೆಗಳು ಇರಲಿಲ್ಲ. ಈ ಎಲ್ಲಾ ನಡಾವಳಿಗಳನ್ನು ಬೆಳಿಗ್ಗೆ 6.00 ಗಂಟೆಯಿಂದ 11.00 ಗಂಟೆಯವರೆಗೆ ಮಹಜರ್ ಬರೆಯಲಾಯಿತು. ಸದರಿ ಮಹಜರನ್ನು ನೋಡುತ್ತಿದ್ದು, ಅದಕ್ಕೆ ಈ ಮೊದಲು ನಿ.ಪಿ.9 ಎಂದು ಗುರುತಿಸಲಾಗಿದೆ, ಅದರಲ್ಲಿರುವ ಸಾಕ್ಷಿಯ ಸಹಿಗೆ ನಿ.ಪಿ.9(ಬಿ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ನ್ಯಾಯಾಲಯದ ಅವಧಿ ಮುಗಿದ ಕಾರಣ, ಮುಂದಿನ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ.ಸ.ಇ.ಎ.ಒ.

Sd/-
(ಉಮೇಶ ಎಂ.ಅಡಿಗ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿ ಸಹಿಃ-

ದಿನಾಂಕಃ 18-02-2020 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.

ಃಮುಂದುವರಿದ ಮುಖ್ಯ ವಿಚಾರಣೆಃ ಅಭಿಯೋಜನೆ ಪರ ಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

9. ದಿನಾಂಕಃ 22-03-2013 ರಂದು ಆರೋಪಿಯ ಮೈ ಮೇಲೆ ಇದ್ದ ಚಿನ್ನದ ಸರ ಮತ್ತು ಉಂಗುರ ಹಾಗೂ ಆತನ ಬಳಿ ಇದ್ದ ರೂ.41,140/-ನ್ನು ಆರೋಪಿಗೆ ಮರಳಿ ನೀಡಿದ ಬಗ್ಗೆ ಆತನಿಂದ ಸ್ವೀಕೃತಿ ಪತ್ರವನ್ನು ಪಡೆದುಕೊಂಡಿದ್ದೇವೆ. ಸದರಿ ಸ್ವೀಕೃತಿ ಪತ್ರವನ್ನು ನೋಡುತ್ತಿದ್ದು, ಅದಕ್ಕೆ ನಿ.ಪಿ. 82 ಎಂದು ಗುರುತಿಸಲಾಯಿತು (ಅದು ಆಸ್ತಿ ಪುಸ್ತಕದ ಪುಟ ಸಂ. 93 ರಲ್ಲಿ ಇದೆ.)

10. ದಿನಾಂಕಃ 23-03-2013 ರಂದು ಗುಲ್ಬರ್ಗದಲ್ಲಿರುವ ಆರೋಪಿಯ ಮನೆಯ ತನಿಖೆಗಾಗಿ ಹೋದ ಕೆ.ಟಿ. ಗುರುರಾಜ್-ಪ್ರಾಸಾ-29, ಇವರು ಆರೋಪಿಯ ಮನೆಯನ್ನು ಶೋಧನೆ ಮಾಡಿ, ಆರೋಪಿಯ ಮನೆಯಲ್ಲಿ ಸಿಕ್ಕ ಎಲ್ಲಾ ವಸ್ತುಗಳ ಲೆಕ್ಕಾಚಾರವನ್ನು ಪಡೆದುಕೊಂಡಿದ್ದು, ಕೆಲವು ದಾಖಲೆಗಳನ್ನು ಮುಂದಿನ ಕ್ರಮಕ್ಕಾಗಿ ವಶಪಡಿಸಿಕೊಂಡಿದ್ದು, ನನ್ನ ಮುಂದೆ ಹಾಜರುಪಡಿಸಿದ್ದಾರೆ. ಪಿ.ಐ. ಆದ ತಿಮ್ಮರಾಯ ಪಾಟೀಲ, ಆಳಂದದಲ್ಲಿಯ ಆರೋಪಿಯ ಮನೆಯನ್ನು ಶೋಧನೆ ಮಾಡಿದ ಬಗ್ಗೆ ಮಾಡಿದ ಮಹಜರನ್ನು, ಹಾಗೂ ಆರೋಪಿಯ ಸಂಬಂಧಿಗಳಿಗೆ ಜಾರಿ ಮಾಡಿದ ಶೋಧನಾ ವಾರೆಂಟನ್ನು, ಅಮಾನತ್ತುಪಡಿಸಿದ ದಾಖಲೆಗಳನ್ನು ತಂದು ನನ್ನ ಮುಂದೆ ದಿನಾಂಕಃ 23-03-2013 ರಂದು ಹಾಜರುಪಡಿಸಿದ್ದಾರೆ.

11. ದಿನಾಂಕಃ 22-03-2013 ರಂದು ಆರೋಪಿಯ ಸ್ವಾಧೀನದಲ್ಲಿದ್ದ ಆತನ ಬೆಂಗಳೂರಿನ ಫ್ಲ್ಯಾಟಿನ ಕೀಯನ್ನು ಮಹಜರ್ ಮುಗಿಸಿಕೊಂಡು ಹೋಗುವಾಗ ತೆಗೆದುಕೊಂಡು ಹೋಗಿದ್ದು, ಪ್ರಾಸಾ-28, ವಿನಯ್, ಇವರಿಗೆ ನಮ್ಮ ಸಿಬ್ಬಂದಿಗಳ ಮುಖಾಂತರ ಕಳುಹಿಸಿಕೊಡಲಾಯಿತು. ದಿನಾಂಕಃ 22-03-2013 ರಂದು ಸಂಜೆ 5.00 ಗಂಟೆಯಿಂದ ರಾತ್ರಿ 9.15 ಗಂಟೆಯವರೆಗೆ ಮಹಜರನ್ನು ಮಾಡಿ, ಕೆಲವು ದಾಖಲೆಗಳನ್ನು ವಶಪಡಿಸಿಕೊಂಡಿದ್ದಾರೆ.

ದಿನಾಂಕಃ 23-03-2013 ರಂದು ಪ್ರಾಸಾ-28 ನನಗೆ ವಾರೆಂಟ್ ಮತ್ತು ದಾಖಲೆಗಳನ್ನು ತಂದು ಹಾಜರುಪಡಿಸಿದ್ದಾರೆ.

12. ನಾನು ಠಾಣಾ ಸ್ವತ್ತು ಪಟ್ಟಿ ಸಂ. 12 ರಿಂದ 14 ರಲ್ಲಿ ಅವುಗಳನ್ನು ನಮೂದಿಸಿ, ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿದ್ದೇನೆ. 3 ಶೋಧನಾ ವಾರೆಂಟ್ ಗಳನ್ನು ಮತ್ತು ಮಹಜರ್ ಗಳನ್ನು ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿದ್ದೇನೆ.

13. ದಿನಾಂಕಃ 24-07-2013 ರಂದು ಲೋಕಾಯುಕ್ತ ಎ.ಡಿ.ಜಿ.ಪಿ. ಬೆಂಗಳೂರು, ಅವರ ಜ್ಞಾಪನಾ ಪತ್ರ ಹಾಗೂ ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ, ಧಾರವಾಡ, ಇವರು ಕಳುಹಿಸಿದ ಆಸ್ತಿ ಮತ್ತು ಋಣಪಟ್ಟಿಯನ್ನು ಸ್ವೀಕರಿಸಿದ್ದೇನೆ. ಎ.ಡಿ.ಜಿ.ಪಿ. ಕಳುಹಿಸಿದ ಜ್ಞಾಪನಾ ಪತ್ರ ವನ್ನು ಈಗ ನೋಡುತ್ತಿದ್ದು, ಅದಕ್ಕೆ ನಿ.ಪಿ. 83 ಎಂದು ಗುರುತಿಸಲಾಯಿತು, ಅದರಲ್ಲಿರುವ ಸಾಕ್ಷಿಯ ಕಿರು ಸಹಿಗೆ ನಿ.ಪಿ.83(ಎ) ಎಂದು ಗುರುತಿಸಲಾಯಿತು. ಆಸ್ತಿ ಮತ್ತು ಋಣಪಟ್ಟಿಯನ್ನು ನೋಡುತ್ತಿದ್ದು, ಅದಕ್ಕೆ ಈ ಮೊದಲು ನಿ.ಪಿ.15 ಮತ್ತು 16 ಎಂದು ಗುರುತಿಸಲಾಗಿದೆ. ಲೋಕೋಪಯೋಗಿ ಇಲಾಖೆಯವರು ಕಳುಹಿಸಿದ ಪತ್ರವನ್ನು ನೋಡುತ್ತಿದ್ದು, ಅದಕ್ಕೆ ನಿ.ಪಿ. 84 ಎಂದು ಗುರುತಿಸಲಾಯಿತು. ಅವುಗಳು ಆಸ್ತಿ ಪುಸ್ತಕದ ವಾಲ್ಯೂಮ್ ನಂ.1 ರ ಪುಟ ಸಂ.109 ರಿಂದ 114 ರವರೆಗೆ ಇರುತ್ತದೆ.

14. ದಿನಾಂಕಃ 14-06-2013 ರಂದು ಎ.ಡಿ.ಜಿ.ಪಿ. ಲೋಕಾಯುಕ್ತ, ಬೆಂಗಳೂರು, ಇವರ ಕಛೇರಿಯಿಂದ ಆರೋಪಿಗೆ ಸೇರಿದ ಆಸ್ತಿ ಮತ್ತು ದಾಯಿತ್ವದ ಪಟ್ಟಿಯ ನಕಲನ್ನು ಪಡೆದುಕೊಂಡಿದ್ದೇನೆ. ಅದನ್ನು ಈಗ ನೋಡುತ್ತಿದ್ದು, ಅದಕ್ಕೆ ಈ ಮೊದಲು ನಿ.ಪಿ.17 ಎಂದು ಗುರುತಿಸಲಾಗಿದೆ. ಅದರೊಂದಿಗೆ ಎ.ಡಿ.ಜಿ.ಪಿ. ಲೋಕಾಯುಕ್ತ, ಬೆಂಗಳೂರು, ಇವರು ಕಳುಹಿಸಿದ

ಜ್ಞಾಪನವನ್ನು ನೋಡುತ್ತಿದ್ದು, ಅದಕ್ಕೆ ನಿ.ಪಿ.85 ಎಂದು ಗುರುತಿಸಲಾಯಿತು. ಅವುಗಳು ಆಸ್ತಿ ಪುಸ್ತಕದ ವಾಲ್ಯೂಮ್ ನಂ.1 ರ ಪುಟ ಸಂ.123 ರಿಂದ 127 ರವರೆಗೆ ಇರುತ್ತದೆ.

15. ದಿನಾಂಕಃ 16-08-2013 ರಂದು ತಹಸಿಲ್ದಾರ್, ಆಳಂದ ತಾಲ್ಲೂಕು, ಇವರು ಕಳುಹಿಸಿದ ಪತ್ರ ಹಾಗೂ ಅದರೊಂದಿಗೆ ಇರುವ ಆರೋಪಿಗೆ ಸೇರಿದ ಆಸ್ತಿಯ ಕಂದಾಯ ತುಂಬಿದ ಪಟ್ಟಿಯನ್ನು ಕಳುಹಿಸಿಕೊಟ್ಟಿದ್ದರು, ಅವುಗಳನ್ನು ಸ್ವೀಕರಿಸಿದ್ದೇನೆ. ಸದರಿ ಪತ್ರ ಮತ್ತು ಅದರೊಂದಿಗೆ ಇರುವ ವಿವರಗಳನ್ನು ನೋಡುತ್ತಿದ್ದು, ಅವುಗಳಿಗೆ ಈ ಮೊದಲು ನಿ.ಪಿ.12 ಮತ್ತು 12(ಎ) ಎಂದು ಗುರುತಿಸಲಾಗಿದೆ. ಅವುಗಳು ಆಸ್ತಿ ಪುಸ್ತಕದ ವಾಲ್ಯೂಮ್ ನಂ.1 ರ ಪುಟ ಸಂ.138 ರಿಂದ 142 ರವರೆಗೆ ಇರುತ್ತದೆ.

16. ದಿನಾಂಕಃ 20-06-2013 ರಂದು ಉಪ ನೊಂದಾಣಿಧಿಕಾರಿಗಳು, ಆಳಂದ, ಇವರು, ಆರೋಪಿಗೆ ಸಂಬಂಧಿಸಿದಂತಹ, ಆಳಂದ ತಾಲ್ಲೂಕಿನಲ್ಲಿರುವ ಆತನ ಎಲ್ಲಾ ಆಸ್ತಿಗಳ ಕ್ರಯ ಪತ್ರದ ನಕಲುಗಳನ್ನು ಕಳುಹಿಸಿಕೊಟ್ಟಿದ್ದರು. ಅವುಗಳನ್ನು ನೋಡುತ್ತಿದ್ದು, ಅವುಗಳಿಗೆ ಈ ಮೊದಲು ನಿ.ಪಿ.18 ಮತ್ತು ನಿ.ಪಿ. 19 ಎಂದು ಗುರುತಿಸಲಾಗಿದೆ. ಅವುಗಳು ಆಸ್ತಿ ಪುಸ್ತಕದ ವಾಲ್ಯೂಮ್ ನಂ.1 ರ ಪುಟ ಸಂ.143 ರಿಂದ 191, ನಿ.ಪಿ.19- ಪುಟ ಸಂ. 192 ರಿಂದ 199 ರವರೆಗೆ ಇರುತ್ತವೆ.

17. ದಿನಾಂಕಃ29-06-2013 ರಂದು ಉಪ ನೊಂದಣಾಧಿಕಾರಿಗಳು, ಓಮರ್ಗ, ಮಹಾರಾಷ್ಟ್ರ ರಾಜ್ಯ, ಇವರು, ಆರೋಪಿಗೆ ಸೇರಿದ ಆಸ್ತಿಗೆ ಸಂಬಂಧಿಸಿದಂತೆ, ಸ್ಟ್ಯಾಂಪ್ ಡ್ಯೂಟಿ ರಿಜಿಸ್ಟ್ರೇಷನ್ ಶುಲ್ಕ ಮತ್ತು ಸ್ಕ್ಯಾನಿಂಗ್ ಶುಲ್ಕಗಳ ದಾಖಲೆಗಳನ್ನು ಕಳುಹಿಸಿದ್ದು, ಅವುಗಳು ಅವುಗಳು ಆಸ್ತಿ ಪುಸ್ತಕದ ವಾಲ್ಯೂಮ್ ನಂ.1 ರ ಪುಟ ಸಂ.200 ಮತ್ತು 201 ರಲ್ಲಿ ಇದ್ದು, ಅವುಗಳಿಗೆ ಈ

ಮೊದಲು ನಿ.ಪಿ. 20 ಎಂದು ಗುರುತಿಸಲಾಗಿದೆ.

18. ದಿನಾಂಕಃ23-09-2013 ರಂದು ಪೌರಾಯುಕ್ತರು, ನಗರಸಭೆ, ಯಾದಗಿರಿ, ಇವರು ಖಾತೆ ಬದಲಾವಣೆಯ ಶುಲ್ಕವನ್ನು ಪಡೆದುಕೊಂಡ ಪತ್ರವನ್ನು ಕಳುಹಿಸಿದ್ದರು. ಅದನ್ನು ನೋಡುತ್ತಿದ್ದು, ಅದಕ್ಕೆ ನಿ.ಪಿ.86 ಎಂದು ಗುರುತಿಸಲಾಯಿತು, ಅದರಲ್ಲಿರುವ ಸಾಕ್ಷಿಯ ಸಹಿಗೆ ನಿ.ಪಿ.86(ಎ) ಎಂದು ಗುರುತಿಸಲಾಯಿತು. ಅದು ಆಸ್ತಿ ಪುಸ್ತಕದ ವಾಲ್ಯೂಮ್ ನಂ.1 ರ ಪುಟ ಸಂ.316 ಮತ್ತು 317 ರಲ್ಲಿ ಇರುತ್ತದೆ.

19. ದಿನಾಂಕಃ 02-04-2013 ರಂದು ಆಯುಕ್ತರು, ನಗರಸಭೆ, ಗುಲ್ಬರ್ಗ, ಇವರು ಕಳುಹಿಸಿದ ಪತ್ರದೊಂದಿಗೆ, ಆರೋಪಿಯ ಪತ್ನಿ ಶ್ರೀಮತಿ ಗಾಯತ್ರಿ ಇವರ ಹೆಸರಿನಲ್ಲಿರುವ ನಿವೇಶನ ಸಂ.23 ರ ವಿವರಗಳನ್ನು ಕಳುಹಿಸಿದ್ದಾರೆ. ಅದರೊಂದಿಗೆ ನೊಂದಣಿ ಮಾಡಿದ ಬಗ್ಗೆ ಸ್ವಾಧೀನ ಪತ್ರ ಹಾಗೂ ನೊಂದಣಿಯಾದ ಪತ್ರದ ನಕಲನ್ನು ಕಳುಹಿಸಿದ್ದಾರೆ. (ಅವುಗಳು ಜೆರಾಕ್ಸ್ ನಕಲುಗಳಾಗಿದ್ದು, ಕಾರಣ ಅವುಗಳನ್ನು ಸಾಕ್ಷಿ ಎಂದು ಪರಿಗಣಿಸಲಾಗುವುದಿಲ್ಲ ಎಂದು ಆರೋಪಿ ಪರ ವಕೀಲರು ಹೇಳುತ್ತಾರೆ, ಅವುಗಳಿಗೆ ನಕಲು ಪ್ರತಿ ಎಂದು ಬರೆದು, ಸದರಿ ದಾಖಲೆಗಳನ್ನು ಹೊಂದಿದ ಅಧಿಕಾರಿ ಸಹಿ ಮಾಡಿರುತ್ತಾರೆ, ಕಾರಣ ಅದನ್ನು ಸಾಕ್ಷ್ಯವೆಂದು ಪರಿಗಣಿಸಬಹುದಾಗಿದೆ, ಆದಾಗ್ಯೂ ಸಹಾ ಅದನ್ನು ಸಾಕ್ಷ್ಯವೆಂದು ಪರಿಗಣಿಸಬಹುದೋ ಅಥವಾ ಇಲ್ಲವೋ ಎಂದು ವಾದ ವಿವಾದದ ಸಮಯದಲ್ಲಿ ತೀರ್ಮಾನಿಸುವ ಷರತ್ತಿಗೆ ಒಳಪಟ್ಟು, ಆರೋಪಿಯ ಆಕ್ಷೇಪಕ್ಕೆ ಒಳಪಟ್ಟು ನಿಶಾನೆ ನೀಡಲಾಗಿದೆ.) ಅವುಗಳಿಗೆ ನಿ.ಪಿ.87 ಎಂದು ಗುರುತಿಸಲಾಯಿತು, ಅದರಲ್ಲಿರುವ ಸಾಕ್ಷಿಯ ಸಹಿಗೆ ನಿ.ಪಿ.87(ಎ) ಎಂದು ಗುರುತಿಸಲಾಯಿತು. ಅವುಗಳು ಆಸ್ತಿ ಪುಸ್ತಕದ ವಾಲ್ಯೂಮ್ ನಂ.1 ರ ಪುಟ ಸಂ.369 ರಿಂದ 382 ರವರೆಗೆ ಇರುತ್ತದೆ.

20. ದಿನಾಂಕಃ05-04-2013 ರಂದು ವಿಜಯಾ ಬ್ಯಾಂಕ್, ಗುಲ್ಬರ್ಗ, ಇವರು ಆರೋಪಿಯ ಉಳಿತಾಯ ಖಾತೆ ಸ್ಟೇಟ್ ಮೆಂಟನ್ನು ಕಳುಹಿಸಿದ್ದಾರೆ. ಅವುಗಳು ಆಸ್ತಿ ಪುಸ್ತಕದ ವಾಲ್ಯೂಮ್ ನಂ.1 ರ ಪುಟ ಸಂ.415 ರಿಂದ 419 ರವರೆಗೆ ಇರುತ್ತದೆ. ಅದಕ್ಕೆ ನಿ.ಪಿ. 88 ಎಂದು ಗುರುತಿಸಲಾಯಿತು.

21. ದಿನಾಂಕಃ 15-06-2013 ರಂದು ಎಕ್ಸಿಸ್ ಬ್ಯಾಂಕ್, ಗುಲ್ಬರ್ಗ, ಇವರು ಆರೋಪಿಯ ಉಳಿತಾಯ ಖಾತೆ ಸ್ಟೇಟ್ ಮೆಂಟನ್ನು ಕಳುಹಿಸಿದ್ದಾರೆ. ಅವುಗಳು ಆಸ್ತಿ ಪುಸ್ತಕದ ವಾಲ್ಯೂಮ್ ನಂ.1 ರ ಪುಟ ಸಂ.420 ರಿಂದ 422 ರವರೆಗೆ ಇರುತ್ತದೆ. ಅದಕ್ಕೆ ಈ ಮೊದಲು ನಿ.ಪಿ. 46 ಎಂದು ಗುರುತಿಸಲಾಗಿದೆ.

22. ದಿನಾಂಕಃ29-06-2013 ರಂದು ವಿಜಯ ಬ್ಯಾಂಕ್, ಯಾದಗಿರಿ, ಇವರು ಆರೋಪಿಯ ಉಳಿತಾಯ ಖಾತೆ ಸ್ಟೇಟ್ ಮೆಂಟನ್ನು ಕಳುಹಿಸಿದ್ದಾರೆ. ಅವುಗಳು ಆಸ್ತಿ ಪುಸ್ತಕದ ವಾಲ್ಯೂಮ್ ನಂ.1 ರ ಪುಟ ಸಂ.423 ರಿಂದ 424 ರವರೆಗೆ ಇರುತ್ತದೆ. ಅದಕ್ಕೆ ಈ ಮೊದಲು ನಿ.ಪಿ. 48 ಎಂದು ಗುರುತಿಸಲಾಗಿದೆ.

23. ದಿನಾಂಕಃ29-06-2013 ರಂದು ವಿಶ್ವಕಲ್ಯಾಣ ಸೌಹಾರ್ದ ಪಟ್ಟಣ ಸಹಕಾರಿ ಬ್ಯಾಂಕ್, ಗುಲ್ಬರ್ಗ, ಇವರು ಆರೋಪಿಯ ಉಳಿತಾಯ ಖಾತೆ ಸ್ಟೇಟ್ ಮೆಂಟನ್ನು ಕಳುಹಿಸಿದ್ದಾರೆ. ಅವುಗಳು ಆಸ್ತಿ ಪುಸ್ತಕದ ವಾಲ್ಯೂಮ್ ನಂ.1 ರ ಪುಟ ಸಂ. 425 ಮತ್ತು 426 ರಲ್ಲಿ ಇರುತ್ತದೆ. ಅದಕ್ಕೆ ಈ ಮೊದಲು ನಿ.ಪಿ. 49 ಎಂದು ಗುರುತಿಸಲಾಗಿದೆ.

24. ದಿನಾಂಕಃ 29-06-2013 ರಂದು ಸಪ್ತಗಿರಿ ಮೋಟಾರ್ಸ್, ಗುಲ್ಬರ್ಗ, ಇವರು ಆರೋಪಿಗೆ ಸಂಬಂಧಪಟ್ಟಂತೆ, ಅವರ ವಾಹನ ಮ್ಯಾಕ್ಸಿಮೋ ಇದರ ರಸೀದಿಯನ್ನು ಕಳುಹಿಸಿಕೊಟ್ಟಿದ್ದರು, ಅದು ಆಸ್ತಿ ಪುಸ್ತಕದ ವಾಲ್ಯೂಮ್

ನಂ.1 ರ ಪುಟ ಸಂ.491 ರಿಂದ 498 ರವರೆಗೆ ಇರುತ್ತದೆ. ಅದಕ್ಕೆ ಈ ಮೊದಲು ನಿ.ಪಿ.45 ಎಂದು ಗುರುತಿಸಲಾಗಿದೆ.

25. ದಿನಾಂಕಃ29-06-2013 ರಂದು ವಿಜಯ ಆಟೋ ಮೋಟಿವ್ಸ್, ಆರೋಪಿಯ ಮಗ ಅರ್ಜುನ್, ಟಿ ವಿ ಎಸ್ ಸ್ಕೂಟಿಯನ್ನು ಖರೀದಿಸಿದ್ದು, ಇದರ ರಸೀದಿಯನ್ನು ಕಳುಹಿಸಿಕೊಟ್ಟಿದ್ದರು, ಅದು ಆಸ್ತಿ ಪುಸ್ತಕದ ವಾಲ್ಯೂಮ್ ನಂ.1 ರ ಪುಟ ಸಂ.499 ರಲ್ಲಿ ಇರುತ್ತದೆ. (ಆರೋಪಿ ಪರ ವಕೀಲರು ಸದರಿ ದಾಖಲೆಯಲ್ಲಿ ತಂದೆಯ ಹೆಸರು ವ್ಯತ್ಯಾಸವಿದ್ದು, ಕಾರಣ ಆರೋಪಿಗೆ ಸಂಬಂಧಿಸಿದ್ದಲ್ಲ ಎಂದು ಆಕ್ಷೇಪಿಸಿದ್ದಾರೆ, ಆರೋಪಿಯ ಆಕ್ಷೇಪಕ್ಕೆ ಒಳಪಟ್ಟು, ಅದಕ್ಕೆ ನಿಶಾನೆ ನೀಡಲಾಗಿದೆ) ಅದಕ್ಕೆ ನಿ.ಪಿ.89 ಎಂದು ಗುರುತಿಸಲಾಯಿತು, ಸಾಕ್ಷಿ ಮುಂದುವರಿದು, ಗುಲ್ಬರ್ಗದ ಆರೋಪಿಯ ಮನೆಯಲ್ಲಿ ಶೋಧನೆ ವಾರೆಂಟನ್ನು ತೆಗೆದುಕೊಂಡು ಹೋಗಿ ಶೋಧನೆ ಮಾಡಿದಾಗ, ಸದರಿ ವಾಹನ ನೊಂದಣಿ ಸಂ. ಕೆಎ-32/ವೈ-9108 ಇತ್ತು ಎಂದು ಹೇಳುತ್ತಾರೆ.

26. ದಿನಾಂಕಃ 20-06-2013 ರಂದು ಗುಲ್ಬರ್ಗ ಎಲೆಕ್ಟ್ರಿಸಿಟಿ ಸಪ್ಲೈ ಕಂ.ಲಿ., ಇವರು ಆರೋಪಿಗೆ ಸಂಬಂಧಪಟ್ಟಂತೆ, ಮೀಟರ್ ರೀಡಿಂಗ್ ಶುಲ್ಕ ಕಟ್ಟಿದ ಬಗ್ಗೆ ರೆವಿನ್ಯೂ ರಿಪೋರ್ಟ್ ಮತ್ತು ಪತ್ರವನ್ನು ಕಳುಹಿಸಿಕೊಟ್ಟಿದ್ದರು, ಅದು ಇದರ ರಸೀದಿಯನ್ನು ಕಳುಹಿಸಿಕೊಟ್ಟಿದ್ದರು, ಅದು ಆಸ್ತಿ ಪುಸ್ತಕದ ವಾಲ್ಯೂಮ್ ನಂ.1 ರ ಪುಟ ಸಂ.502 ಮತ್ತು 503 ರಲ್ಲಿ ಇರುತ್ತದೆ. (ಅವುಗಳು ಜೆರಾಕ್ಸ್ ನಕಲುಗಳಾಗಿದ್ದು, ಕಾರಣ ಅವುಗಳನ್ನು ಸಾಕ್ಷಿ ಎಂದು ಪರಿಗಣಿಸಲಾಗುವುದಿಲ್ಲ ಎಂದು ಆರೋಪಿ ಪರ ವಕೀಲರು ಹೇಳುತ್ತಾರೆ, ಸದರಿ ದಾಖಲೆಗಳನ್ನು ಸಂಬಂಧಿಸಿದ ಕಂಪನಿಯವರು ಕಳುಹಿಸಿಕೊಟ್ಟಿದ್ದು, ಅದನ್ನು ಸಾಕ್ಷ್ಯವೆಂದು ಪರಿಗಣಿಸಬಹುದೋ ಅಥವಾ ಇಲ್ಲವೋ ಎಂದು ವಾದ ವಿವಾದದ ಸಮಯದಲ್ಲಿ ತೀರ್ಮಾನಿಸುವ ಷರತ್ತಿಗೆ ಒಳಪಟ್ಟು, ಆರೋಪಿಯ ಆಕ್ಷೇಪಕ್ಕೆ

ಒಳಪಟ್ಟು ನಿಶಾನೆ ನೀಡಲಾಗಿದೆ.) ಅದಕ್ಕೆ ನಿ.ಪಿ. 90 ಎಂದು ಗುರುತಿಸಲಾಯಿತು.

27. ದಿನಾಂಕಃ 02-07-2013 ರಂದು ಜೆಸ್ಕಾಂ, ಗುಲ್ಬರ್ಗ, ಇವರು ಆರೋಪಿಗೆ ಸಂಬಂಧಪಟ್ಟಂತೆ ಇನ್ನೊಂದು ಮೀಟರ್ ನಂಬರಿನ ಶುಲ್ಕ ಕಟ್ಟಿದ ಬಗ್ಗೆ ರೆವಿನ್ಯೂ ರಿಪೋರ್ಟ್ ಮತ್ತು ಪತ್ರವನ್ನು ಕಳುಹಿಸಿಕೊಟ್ಟಿದ್ದರು, ಅದು ಇದರ ರಸೀದಿಯನ್ನು ಕಳುಹಿಸಿಕೊಟ್ಟಿದ್ದರು, ಅದು ಆಸ್ತಿ ಪುಸ್ತಕದ ವಾಲ್ಯೂಮ್ ನಂ.1 ರ ಪುಟ ಸಂ.504 ಮತ್ತು 505 ರಲ್ಲಿ ಇರುತ್ತದೆ. (ಅವುಗಳು ಜೆರಾಕ್ಸ್ ನಕಲುಗಳಾಗಿದ್ದು, ಕಾರಣ ಅವುಗಳನ್ನು ಸಾಕ್ಷಿ ಎಂದು ಪರಿಗಣಿಸಲಾಗುವುದಿಲ್ಲ ಎಂದು ಆರೋಪಿ ಪರ ವಕೀಲರು ಹೇಳುತ್ತಾರೆ, ಸದರಿ ದಾಖಲೆಗಳನ್ನು ಸಂಬಂಧಿಸಿದ ಕಂಪನಿಯವರು ಕಳುಹಿಸಿಕೊಟ್ಟಿದ್ದು, ಅದನ್ನು ಸಾಕ್ಷ್ಯವೆಂದು ಪರಿಗಣಿಸಬಹುದೋ ಅಥವಾ ಇಲ್ಲವೋ ಎಂದು ವಾದ ವಿವಾದದ ಸಮಯದಲ್ಲಿ ತೀರ್ಮಾನಿಸುವ ಷರತ್ತಿಗೆ ಒಳಪಟ್ಟು, ಆರೋಪಿಯ ಆಕ್ಷೇಪಕ್ಕೆ ಒಳಪಟ್ಟು ನಿಶಾನೆ ನೀಡಲಾಗಿದೆ.) ಅದಕ್ಕೆ ನಿ.ಪಿ.91 ಎಂದು ಗುರುತಿಸಲಾಯಿತು.

28. ದಿನಾಂಕಃ 01-07-2013 ರಂದು ಡಿ ಹೆಚ್ ಎಫ್ ಎಲ್ ಸಂಸ್ಥೆಯಿಂದ ಆರೋಪಿ ಸಾಲ ಪಡೆದ ಬಗ್ಗೆ ದಾಖಲೆಗಳು ಮತ್ತು ಸ್ಟೇಟ್ ಮೆಂಟನ್ನು ಕಳುಹಿಸಿಕೊಟ್ಟಿದ್ದರು, ಅದು ಆದಾಯ ಪುಸ್ತಕದ ವಾಲ್ಯೂಮ್ ನಂ.1 ರ ಪುಟ ಸಂ.640 ರಿಂದ 649 ರವರೆಗೆ ಇರುತ್ತದೆ. ಅದಕ್ಕೆ ನಿ.ಪಿ. 92 ಎಂದು ಗುರುತಿಸಲಾಯಿತು.

29. ದಿನಾಂಕಃ 20-06-2013 ರಂದು ಎಲ್ ಐ ಸಿ, ಗುಲ್ಬರ್ಗ, ಇವರು ಆರೋಪಿಗೆ ಸಂಬಂಧಿಸಿದಂತಹ ಪಾಲಿಸಿಗೆ ಸಂಬಂಧಪಟ್ಟಂತೆ ಕವರಿಂಗ್ ಲೆಟರ್, ರಸೀದಿ, ಮತ್ತು ಸ್ಟೇಟಸ್ ರಿಪೋರ್ಟನ್ನು ಕಳುಹಿಸಿಕೊಟ್ಟಿದ್ದರು.

ಅವುಗಳು ಖರ್ಚು ಪುಸ್ತಕದ ವಾಲ್ಯೂಮ್ ನಂ.1 ರ ಪುಟ ಸಂ.695 ರಿಂದ 697 ರವರೆಗೆ ಇರುತ್ತದೆ. ಅದಕ್ಕೆ ನಿ.ಪಿ. 93 ಎಂದು ಗುರುತಿಸಲಾಯಿತು.

30. ದಿನಾಂಕಃ 29-06-2013 ರಂದು ಓರಿಯಂಟಲ್ ಇನ್‌ಶೂರೆನ್ಸ್ ಕಂಪನಿ, ಗುಲ್ಬರ್ಗ, ಇವರು ಆರೋಪಿಗೆ ಸಂಬಂಧಿಸಿದಂತೆ, ವಾಹನಗಳ ಇನ್‌ಶೂರೆನ್ಸ್ ಪಾಲಿಸಿ ನಕಲುಗಳನ್ನು ಕಳುಹಿಸಿಕೊಟ್ಟಿದ್ದರು. ಅದು ಖರ್ಚು ಪುಸ್ತಕದ ವಾಲ್ಯೂಮ್ ನಂ.1 ರ ಪುಟ ಸಂ.745 ರಿಂದ 751 ರವರೆಗೆ ಇರುತ್ತದೆ. ಪತ್ರಕ್ಕೆ ಈ ಮೊದಲು ನಿ.ಪಿ.64 ಎಂದು ಗುರುತಿಸಲಾಗಿದೆ. ಪಾಲಿಸಿಗಳಿಗೆ ನಿ.ಪಿ. 64(ಬಿ)ಯಿಂದ (ಡಿ)ವರೆಗೆ ಗುರುತಿಸಲಾಗಿದೆ.

31. ದಿನಾಂಕಃ 29-06-2013 ರಂದು ಓರಿಯಂಟಲ್ ಇನ್‌ಶೂರೆನ್ಸ್ ಕಂಪನಿ, ಗುಲ್ಬರ್ಗ, ಇವರು ಆರೋಪಿಗೆ ಸಂಬಂಧಿಸಿದಂತೆ, ಸ್ಕೂಟಿಯ ವಿಮಾ ಪಾಲಿಸಿ ನಕಲನ್ನು ಕಳುಹಿಸಿಕೊಟ್ಟಿದ್ದರು. ಅದು ಖರ್ಚು ಪುಸ್ತಕದ ವಾಲ್ಯೂಮ್ ನಂ.1 ರ ಪುಟ ಸಂ. 752 ರಿಂದ 754 ರವರೆಗೆ ಇರುತ್ತದೆ. ಪತ್ರಕ್ಕೆ ಈ ಮೊದಲು ನಿ.ಪಿ.65 ಎಂದು ಗುರುತಿಸಲಾಗಿದೆ. ಪಾಲಿಸಿಗೆ ನಿ.ಪಿ. 65(ಬಿ) ಎಂದು ಗುರುತಿಸಲಾಗಿದೆ.

32. ದಿನಾಂಕಃ 05-07-2013 ರಂದು ಆರ್.ಟಿ.ಓ. ಗುಲ್ಬರ್ಗ, ಇವರು, ಆರೋಪಿಗೆ ಸಂಬಂಧಿಸಿದಂತೆ, ಬಜಾಜ್ ಡಿಸ್ಕವರಿ, ಟಿವಿಎಸ್ ಸ್ಕೂಟಿ, ಬೊಲೇರೋ ವಾಹನಗಳ ವಿವರಗಳನ್ನು ಕಳುಹಿಸಿಕೊಟ್ಟಿದ್ದಾರೆ. ಅವುಗಳು ಖರ್ಚು ಪುಸ್ತಕದ ವಾಲ್ಯೂಮ್ ನಂ.1 ರ ಪುಟ ಸಂ.755 ರಿಂದ 760 ರವರೆಗೆ ಇರುತ್ತದೆ. (ಆರೋಪಿ ಪರ ವಕೀಲರು ಸದರಿ ವಾಹನಗಳು ಆರೋಪಿಗೆ ಅಥವಾ ಆತನ ಕುಟುಂಬದ ಸದಸ್ಯರಿಗೆ ಸೇರಿದ್ದಲ್ಲ ಕಾರಣ ಅವುಗಳನ್ನು ಸಾಕ್ಷವೆಂದು ಗುರುತಿಸಲು ಆಗುವುದಿಲ್ಲ ಎಂದು ಹೇಳುತ್ತಾರೆ, ಈ ಬಗ್ಗೆ ವಾದ ವಿವಾದದ ಸಮಯದಲ್ಲಿ ನಿರ್ಣಯಿಸಲಾಗುವುದು.)ಅದಕ್ಕೆ ನಿ.ಪಿ.94 ಎಂದು

ಗುರುತಿಸಲಾಯಿತು.

33. ದಿನಾಂಕಃ05-07-2013 ರಂದು ಆರ್ ಟಿ ಒ, ಗುಲ್ಬರ್ಗ, ಇವರು ಆರೋಪಿಗೆ ಸೇರಿದ ಮಹೇಂದ್ರ ಬೊಲೋರೋ ವಾಹನ ನೊಂದಣಿ ಸಂ.ಕೆಎ-32/ಎಂ.8252, ಇದರ ಸವಕಳಿ ಮೌಲ್ಯ ನಿರ್ಧಾರ ಮಾಡಿ ವರದಿಯನ್ನು ಕಳುಹಿಸಿಕೊಟ್ಟಿದ್ದಾರೆ. ಓರಿಯಂಟಲ್ ಇನ್‌ಶೂರೆನ್ಸ್ ಕಂಪನಿ, ಗುಲ್ಬರ್ಗ, ಇವರು ಆರೋಪಿಗೆ ಸಂಬಂಧಿಸಿದಂತೆ, ವಾಹನಗಳ ಇನ್‌ಶೂರೆನ್ಸ್ ಪಾಲಿಸಿ ನಕಲುಗಳನ್ನು ಕಳುಹಿಸಿಕೊಟ್ಟಿದ್ದರು. ಅದು ಖರ್ಚು ಪುಸ್ತಕದ ವಾಲ್ಯೂಮ್ ನಂ.1 ರ ಪುಟ ಸಂ.760(ಎ)ಯಿಂದ 760(ಡಿ)ರವರೆಗೆ ಇರುತ್ತದೆ. (ಆರೋಪಿ ಪರ ವಕೀಲರು ಸದರಿ ವಾಹನ ಆರೋಪಿಗೆ ಅಥವಾ ಆತನ ಕುಟುಂಬದ ಸದಸ್ಯರಿಗೆ ಸೇರಿದ್ದಲ್ಲ ಮತ್ತು ಅವುಗಳು ಜೆರಾಕ್ಸ್ ನಕಲುಗಳಾಗಿದ್ದು ಕಾರಣ ಅವುಗಳಿಗೆ ನಿಶಾನೆ ನೀಡಲು ಆಗುವುದಿಲ್ಲ ಎಂದು ಹೇಳುತ್ತಾರೆ, ಆರೋಪಿಯ ಆಕ್ಷೇಪಕ್ಕೆ ಒಳಪಟ್ಟು ನಿಶಾನೆ ನೀಡಲಾಗಿದೆ, ಈ ಬಗ್ಗೆ ವಾದ ವಿವಾದದ ಸಮಯದಲ್ಲಿ ನಿರ್ಣಯಿಸಲಾಗುವುದು,) ಪತ್ರಕ್ಕೆ ನಿ.ಪಿ.95 ಎಂದು ಗುರುತಿಸಲಾಯಿತು.

34. ದಿನಾಂಕಃ 29-06-2013 ರಂದು ಜೆಸ್ಕಾಂ, ಆಳಂದ, ಇವರು ಆರೋಪಿಗೆ ಸಂಬಂಧಿಸಿದಂತಹ ಆಳಂದ ನಗರದಲ್ಲಿರುವ ಆರೋಪಿಯ ಮನೆಯ ಆರ್ ಆರ್ ನಂ.NWD35884 ಇದರ ಕಸ್ಟಮರ್ ಹಿಸ್ಟರಿ ಮತ್ತು ರೆವಿನ್ಯೂ ರಿಪೋರ್ಟ್ ಮತ್ತು ದೃಢೀಕರಣ ಪತ್ರವನ್ನು ಕಳುಹಿಸಿಕೊಟ್ಟಿದ್ದಾರೆ. ಅದು ಖರ್ಚು ಪುಸ್ತಕದ ವಾಲ್ಯೂಮ್ ನಂ.1 ರ ಪುಟ ಸಂ. 761 ರಿಂದ 764 ರವರೆಗೆ ಇರುತ್ತದೆ. ಪತ್ರಕ್ಕೆ ನಿ.ಪಿ. 96 ಎಂದು ಗುರುತಿಸಲಾಯಿತು.

35. ದಿನಾಂಕಃ 02-07-2013 ರಂದು ಜೆಸ್ಕಾಂ, ಸ.ಕಾ.ಅ.ಗುಲ್ಬರ್ಗ, ಇವರು ಆರೋಪಿಗೆ ಸಂಬಂಧಿಸಿದಂತೆ ಆರ್ ಆರ್ ನಂ. 108687, ಇದರ ವಿದ್ಯುತ್

ಸರಬರಾಜು ಕೇಳಿದ ಅರ್ಜಿಯ ನಕಲನ್ನು ಕಳುಹಿಸಿಕೊಟ್ಟಿದ್ದರು ಅದರೊಂದಿಗೆ ಸದರಿ ಆಸ್ತಿಯ ಟ್ಯಾಕ್ಸ್ ನಕಲನ್ನು ಕಳುಹಿಸಿಕೊಟ್ಟಿದ್ದರು. ಸದರಿ ಮೀಟರ್ ನಂಬರಿನ ಸಂಪೂರ್ಣ ಲೆಕ್ಕ ಪತ್ರದ ನಕಲನ್ನು ಕಳುಹಿಸಿಕೊಟ್ಟಿದ್ದರು. ಅವುಗಳು ಖರ್ಚು ಪುಸ್ತಕದ ವಾಲ್ಯೂಮ್ ನಂ.1 ರ ಪುಟ ಸಂ. 765 ರಿಂದ 790 ರವರೆಗೆ ಇರುತ್ತದೆ. (ಅವುಗಳು ಜೆರಾಕ್ಸ್ ನಕಲುಗಳಾಗಿದ್ದು, ಕಾರಣ ಅವುಗಳನ್ನು ಸಾಕ್ಷಿ ಎಂದು ಪರಿಗಣಿಸಲಾಗುವುದಿಲ್ಲ ಎಂದು ಆರೋಪಿ ಪರ ವಕೀಲರು ಹೇಳುತ್ತಾರೆ, ಸದರಿ ದಾಖಲೆಗಳನ್ನು ಸಂಬಂಧಿಸಿದ ಕಂಪನಿಯವರು ಕಳುಹಿಸಿಕೊಟ್ಟಿದ್ದು, ಅದನ್ನು ಸಾಕ್ಷ್ಯವೆಂದು ಪರಿಗಣಿಸಬಹುದೋ ಅಥವಾ ಇಲ್ಲವೋ ಎಂದು ವಾದ ವಿವಾದದ ಸಮಯದಲ್ಲಿ ತೀರ್ಮಾನಿಸುವ ಷರತ್ತಿಗೆ ಒಳಪಟ್ಟು, ಆರೋಪಿಯ ಆಕ್ಷೇಪಕ್ಕೆ ಒಳಪಟ್ಟು ನಿಶಾನೆ ನೀಡಲಾಗಿದೆ.) ಸದರಿ ದಾಖಲೆಗೆ ನಿ.ಪಿ. 97 ಎಂದು ಗುರುತಿಸಲಾಯಿತು.

36. ದಿನಾಂಕಃ29-06-2013 ರಂದು ಶ್ರೀ ಗುರು ಇಂಡಿಪೆಂಡೆಂಟ್ ಪಿ ಯು ಕಾಲೇಜ್ ಆಫ್ ಸೈನ್ಸ್, ಇದರ ಪ್ರಿನ್ಸಿಪಾಲರು ಆರೋಪಿಯ ಮಗಳಾದ ಕುಃ ರಾಧಿಕಾ.ಸಿ. ಮೆಕೆಲೆ, ಇವರ ಪಿಯುಸಿ ಮೊದಲನೆ ಮತ್ತು ಎರಡನೆ ವರ್ಷದ ಶುಲ್ಕವನ್ನು ಕಟ್ಟಿದ ಬಗ್ಗೆ ತಮ್ಮ ಪತ್ರದಲ್ಲಿ ಉಲ್ಲೇಖಿಸಿದ್ದಾರೆ. ಸದರಿ ಪತ್ರವನ್ನು ನೋಡುತ್ತಿದ್ದು, ಅದಕ್ಕೆ ನಿ.ಪಿ. 98 ಎಂದು ಗುರುತಿಸಲಾಯಿತು. ಅದು ಖರ್ಚು ಪುಸ್ತಕದ ವಾಲ್ಯೂಮ್ ನಂ.1 ರ ಪುಟ ಸಂ. 803 ರಲ್ಲಿ ಇರುತ್ತದೆ.

37. ದಿನಾಂಕಃ 20-06-2013 ರಂದು ಉಪ ನೊಂದಣಾಧಿಕಾರಿ, ಆಳಂದ, ಇವರು ಆರೋಪಿಗೆ ಸಂಬಂಧಿಸಿದಂತೆ, ಖರೀದಿಸಿದ ಬೆಲೆ, ಸ್ಟ್ಯಾಂಪ್ ಡ್ಯೂಟಿ ಪಾವತಿ ಮಾಡಿದ ಪತ್ರವನ್ನು ಕಳುಹಿಸಿಕೊಟ್ಟಿದ್ದು, ಅದು ಖರ್ಚು ಪುಸ್ತಕದ ವಾಲ್ಯೂಮ್ ನಂ.1 ರ ಪುಟ ಸಂ. 817 ಮತ್ತು 818 ರಲ್ಲಿ ಇರುತ್ತದೆ. ಅದಕ್ಕೆ ಈ ಮೊದಲು ನಿ.ಪಿ. 18(ಎ) ಎಂದು ಗುರುತಿಸಲಾಗಿದೆ. (ಸದರಿ ದಾಖಲೆ ಆಸ್ತಿ

ಪುಸ್ತಕದ ಪುಟ ಸಂ. 143 ರಿಂದ 191 ರವರೆಗೆ ದಾಖಲೆ ಮಾಡಲಾಗಿದೆ, ಹಾಗೂ ಅದು ನಿ.ಪಿ. 18 ಎಂದು ಸಾಕ್ಷಿ ಹೇಳಿದ್ದಾರೆ.)

38. ದಿನಾಂಕಃ 20-06-2013 ರಂದು ಉಪ ನೊಂದಣಾಧಿಕಾರಿ, ಗುಲ್ಬರ್ಗ, ಇವರು ಆರೋಪಿಗೆ ಸಂಬಂಧಿಸಿದಂತೆ, ಕುಟುಂಬದ ಸದಸ್ಯರ ಸ್ಥಿರಾಸ್ತಿಗಳನ್ನು ಖರೀದಿಸಿದ ಮೌಲ್ಯ, ಸ್ಟ್ಯಾಂಪ್ ಡ್ಯೂಟಿ ಪಾವತಿ ಮಾಡಿದ ವಿವರಗಳನ್ನು ಪತ್ರದ ಮುಖಾಂತರ ಕಳುಹಿಸಿಕೊಟ್ಟಿದ್ದು, ಅದು ಖರ್ಚು ಪುಸ್ತಕದ ವಾಲ್ಯೂಮ್ ನಂ.1 ರ ಪುಟ ಸಂ. 819 ಮತ್ತು 820 ರಲ್ಲಿ ಇರುತ್ತದೆ. (ಅವುಗಳು ಜೆರಾಕ್ಸ್ ನಕಲುಗಳಾಗಿದ್ದು, ಕಾರಣ ಅವುಗಳನ್ನು ಸಾಕ್ಷಿ ಎಂದು ಪರಿಗಣಿಸಲಾಗುವುದಿಲ್ಲ ಎಂದು ಆರೋಪಿ ಪರ ವಕೀಲರು ಹೇಳುತ್ತಾರೆ, ಸದರಿ ದಾಖಲೆಗಳನ್ನು ಸಂಬಂಧಿಸಿದ ಅಧಿಕಾರಿಗಳು ಕಳುಹಿಸಿಕೊಟ್ಟಿದ್ದು, ಅದನ್ನು ಸಾಕ್ಷ್ಯವೆಂದು ಪರಿಗಣಿಸಬಹುದೋ ಅಥವಾ ಇಲ್ಲವೋ ಎಂದು ವಾದ ವಿವಾದದ ಸಮಯದಲ್ಲಿ ತೀರ್ಮಾನಿಸುವ ಷರತ್ತಿಗೆ ಒಳಪಟ್ಟು, ಆರೋಪಿಯ ಆಕ್ಷೇಪಕ್ಕೆ ಒಳಪಟ್ಟು ನಿಶಾನೆ ನೀಡಲಾಗಿದೆ.) ಅದಕ್ಕೆ ನಿ.ಪಿ. 99 ಎಂದು ಗುರುತಿಸಲಾಯಿತು.

39. ದಿನಾಂಕಃ 29-06-2013 ರಂದು ಉಪ ನೊಂದಣಾಧಿಕಾರಿ, ಓಮರ್ಗ, ಮಹಾರಾಷ್ಟ್ರ ರಾಜ್ಯ, ಇವರು ಆರೋಪಿಗೆ ಸಂಬಂಧಿಸಿದಂತೆ, ಆಸ್ತಿಯ ಸ್ಟ್ಯಾಂಪ್ ಡ್ಯೂಟಿ, ರಿಜಿಸ್ಟ್ರೇಷನ್ ಶುಲ್ಕ ಮತ್ತು ಸ್ಕ್ಯಾನಿಂಗ್ ಶುಲ್ಕ ಪಾವತಿ ಮಾಡಿದ ವಿವರಗಳನ್ನು ಪತ್ರದ ಮುಖಾಂತರ ಕಳುಹಿಸಿಕೊಟ್ಟಿದ್ದು, ಅದು ಖರ್ಚು ಪುಸ್ತಕದ ವಾಲ್ಯೂಮ್ ನಂ.1 ರ ಪುಟ ಸಂ.821 ಮತ್ತು 822 ರಲ್ಲಿ ಇರುತ್ತದೆ. ಅವುಗಳಿಗೆ ಈ ಮೊದಲು ನಿ.ಪಿ.19(ಬಿ) ಎಂದು ಗುರುತಿಸಲಾಗಿದೆ. (ಸಾಕ್ಷಿ ಮುಂದುವರಿದು, ಆಸ್ತಿ ಪುಸ್ತಕದ ಪುಟ ಸಂ.200 ರಿಂದ 265 ರವರೆಗೆ ಇರುವ ದಾಖಲೆಗಳಲ್ಲಿ ನಿ.ಪಿ.20 ರಂತೆ ಗುರುತಿಸಲಾಗಿದೆ ಎಂದು ಹೇಳುತ್ತಾರೆ.)

40. ದಿನಾಂಕಃ 15-06-2013 ರಂದು ಯಾದಗಿರಿಯ ಉಪ ನೊಂದಣಾಧಿಕಾರಿಗಳು, ಪತ್ರ ಕಳುಹಿಸಿದ್ದು, ಅದರಲ್ಲಿ ಅರ್ಜುನ ಎನ್ನುವವರ ಬಾಬ್ತು ಆಸ್ತಿಯ, ಖರೀದಿಸಿದ ಮೌಲ್ಯ, ನೊಂದಣಿ ಶುಲ್ಕ, ಮತ್ತು ರಿಜಿಸ್ಟ್ರೇಷನ್ ಶುಲ್ಕದ ವಿವರಗಳನ್ನು ಬರೆದಿದ್ದಾರೆ. ಅದು ಖರ್ಚು ಪುಸ್ತಕದ ವಾಲ್ಯೂಮ್ ನಂ.1 ರ ಪುಟ ಸಂ.823 ರಲ್ಲಿ ಇರುತ್ತದೆ. (ಅವುಗಳು ಜೆರಾಕ್ಸ್ ನಕಲುಗಳಾಗಿದ್ದು, ಕಾರಣ ಅವುಗಳನ್ನು ಸಾಕ್ಷಿ ಎಂದು ಪರಿಗಣಿಸಲಾಗುವುದಿಲ್ಲ ಎಂದು ಆರೋಪಿ ಪರ ವಕೀಲರು ಹೇಳುತ್ತಾರೆ, ಸದರಿ ದಾಖಲೆಗಳನ್ನು ಸಂಬಂಧಿಸಿದ ಅಧಿಕಾರಿಗಳು ಕಳುಹಿಸಿಕೊಟ್ಟಿದ್ದು, ಅದನ್ನು ಸಾಕ್ಷ್ಯವೆಂದು ಪರಿಗಣಿಸಬಹುದೋ ಅಥವಾ ಇಲ್ಲವೋ ಎಂದು ವಾದ ವಿವಾದದ ಸಮಯದಲ್ಲಿ ತೀರ್ಮಾನಿಸುವ ಷರತ್ತಿಗೆ ಒಳಪಟ್ಟು, ಆರೋಪಿಯ ಆಕ್ಷೇಪಕ್ಕೆ ಒಳಪಟ್ಟು ನಿಶಾನೆ ನೀಡಲಾಗಿದೆ.) ಅದಕ್ಕೆ ನಿ.ಪಿ. 100 ಎಂದು ಗುರುತಿಸಲಾಯಿತು. ನಿ.ಪಿ. 100 ನ್ನು ನನ್ನ ನಂತರ ಬಂದ ತನಿಖಾಧಿಕಾರಿ ಚಾಸಾ-108 ಪಡೆದುಕೊಂಡಿದ್ದಾರೆ. ಸದರಿಯವರು ಈಗ ಮೃತರಾಗಿದ್ದಾರೆ.

41. ದಿನಾಂಕಃ 29-06-2013 ರಂದು ಆಳಂದ ಪಂಚಾಯ್ತಿಗೆ ಆರೋಪಿ ಮನೆ ಕಟ್ಟುವ ಬಗ್ಗೆ ನೀಲ ನಕ್ಷೆ, ಅರ್ಜಿ, ನಮೂನೆ ನಂ.12 ಇವುಗಳನ್ನು ಕೊಟ್ಟಿರುವುದನ್ನು, ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ, ಅವುಗಳ ನಕಲುಗಳನ್ನು ನನಗೆ ಕಳುಹಿಸಿಕೊಟ್ಟಿದ್ದಾರೆ. ಸದರಿ ದಾಖಲೆಗಳು ಖರ್ಚು ಪುಸ್ತಕದ ವಾಲ್ಯೂಮ್ ನಂ.1 ರ ಪುಟ ಸಂ.830 ಮತ್ತು 834 ರಲ್ಲಿ ಇರುತ್ತದೆ. ಅವುಗಳಿಗೆ ಈ ಮೊದಲು ನಿ.ಪಿ.22 ಎಂದು ಗುರುತಿಸಲಾಗಿದೆ.

42. ದಿನಾಂಕಃ 29-06-2013 ರಂದು ಗುಲ್ಬರ್ಗ ಎಮಿಷನ್ ಟೆಸ್ಟ್ ಸೆಂಟರ್, ಇವರು ಪತ್ರ ಬರೆದು, ಆರೋಪಿಗೆ ಸೇರಿದ ಬೊಲೇರೋ ವಾಹನದ ಕಂಪ್ಯೂಟರ್ ಎಮಿಷನ್ ಟೆಸ್ಟ್ ಮಾಡಿದ ರಸೀದಿಯನ್ನು ಕಳುಹಿಸಿದ್ದಾರೆ. ಸದರಿ

ದಾಖಲೆ ಖರ್ಚು ಪುಸ್ತಕದ ವಾಲ್ಯೂಮ್ ನಂ.1 ರ ಪುಟ ಸಂ.847 ಮತ್ತು 848 ರಲ್ಲಿ ಇರುತ್ತದೆ. ಅದಕ್ಕೆ ನಿ.ಪಿ.101 ಎಂದು ಗುರುತಿಸಲಾಯಿತು. (ಸದರಿ ದಾಖಲೆ ಆರೋಪಿಗೆ ಸೇರಿದ ದಾಖಲೆ ಅಲ್ಲ ಎಂದು ಆರೋಪಿ ಪರ ವಕೀಲರು ಆಕ್ಷೇಪಿಸಿದ್ದಾರೆ, ಅದನ್ನು ವಾದ ವಿವಾದದ ಸಮಯದಲ್ಲಿ ಪರಿಗಣಿಸಲಾಗುವುದು.)

43. ದಿನಾಂಕಃ 29-06-2013 ರಂದು ಶ್ರೀ ಗಣೇಶ ಅಪ್ಲೈಯನ್ಸಸ್, ಇವರು, ಆರೋಪಿ ತಮ್ಮಿಂದ ಖರೀದಿಸಿದ ಟಿವಿ ಮತ್ತು ಸ್ಟಬ್ಯುಲೈಸರ್, ಬಗ್ಗೆ ಪತ್ರ ಮತ್ತು ರಸೀದಿಗಳನ್ನು ಕಳುಹಿಸಿಕೊಟ್ಟಿದ್ದರರು. ಅವುಗಳು ಖರ್ಚು ಪುಸ್ತಕದ ವಾಲ್ಯೂಮ್ ನಂ.1 ರ ಪುಟ ಸಂ.849 ರಿಂದ 851 ರಲ್ಲಿ ಇರುತ್ತದೆ. ಪತ್ರಕ್ಕೆ ಈ ಮೊದಲು ನಿ.ಪಿ.66 ಎಂದು ಗುರುತಿಸಲಾಗಿದೆ, ರಸೀದಿಗಳಿಗೆ ಈ ಮೊದಲು ನಿ.ಪಿ. 66(ಬಿ) ಮತ್ತು 66(ಸಿ) ಎಂದು ಗುರುತಿಸಲಾಗಿದೆ.

44. ದಿನಾಂಕಃ 29-06-2013 ರಂದು ಸ.ಕಾ.ಅ. ಪಂಚಾಯತ್ ರಾಜ್, ಇಂಜಿನಿಯರಿಂಗ್ ವಿಭಾಗ, ಆಳಂದ, ಇವರು ಬೋರ್ ವೆಲ್ ತೆಗೆಯಲು ಅಂದಾಜು ವೆಚ್ಚದ ಪಟ್ಟಿಯನ್ನು ಕಳುಹಿಸಿಕೊಟ್ಟಿದ್ದಾರೆ. ಸದರಿ ದಾಖಲೆಗಳು ಖರ್ಚು ಪುಸ್ತಕದ ವಾಲ್ಯೂಮ್ ನಂ.1 ರ ಪುಟ ಸಂ.852 ರಿಂದ 859 ರವರೆಗೆ ಇರುತ್ತದೆ. ಅದಕ್ಕೆ ಈ ಮೊದಲು ನಿ.ಪಿ.67 ಎಂದು ಗುರುತಿಸಲಾಗಿದೆ, ಅಂದಾಜು ವೆಚ್ಚದ ಪಟ್ಟಿಗೆ ಈ ಮೊದಲು 67(ಬಿ) ಮತ್ತು ಒಂದು ಫೋಟೋಗೆ ಈ ಮೊದಲು ನಿ.ಪಿ. 67(ಸಿ) ಎಂದು ಗುರುತಿಸಲಾಗಿದೆ.

45. ದಿನಾಂಕಃ08-07-2013 ರಂದು ಆರೋಪಿ ವಿಜಯಲಕ್ಷ್ಮಿ ಕ್ಲಿನಿಕ್, ಗುಲ್ಬರ್ಗ, ಇಲ್ಲಿ ಇಸಿಜಿ ಮಾಡಿದ ಖರ್ಚಿನ ಬಾಬ್ತು ವೈದ್ಯರಾದ ಡಾಃ ವೆಂಕಟೇಶ ದೇಸಾಯಿ, ಇವರು ಪತ್ರ ಬರೆದು, ಖರ್ಚಿನ ವಿವರಗಳನ್ನು ಕೊಟ್ಟಿದ್ದಾರೆ. ಅದು ಖರ್ಚು ಪುಸ್ತಕದ ವಾಲ್ಯೂಮ್ ನಂ.1 ರ ಪುಟ ಸಂ.859 ರಲ್ಲಿ ಇರುತ್ತದೆ.

ಅದಕ್ಕೆ ನಿ.ಪಿ.102 ಎಂದು ಗುರುತಿಸಲಾಯಿತು.

46. ಅಕ್ಟೋಬರ್-2013 ರಲ್ಲಿ ನನ್ನನ್ನು ಸದರಿ ಕಛೇರಿಯಿಂದ ವರ್ಗಾವಣೆ ಮಾಡಿದ ಕಾರಣ, ಮುಂದಿನ ತನಿಖೆಗಾಗಿ ಕಡತವನ್ನು ಶೇಖ್ ಹುಸೇನ್, ಡಿ.ವೈ.ಎಸ್.ಪಿ., ಲೋಕಾಯುಕ್ತ, ಚಿಕ್ಕಮಗಳೂರು, ಇವರಿಗೆ ಹಸ್ತಾಂತರಿಸಿದ್ದೇನೆ. ನನ್ನಿಂದ ಕಡತವನ್ನು ಪಡೆದುಕೊಂಡ ನಂತರ ಅವರು ಮುಂದಿನ ತನಿಖೆಯನ್ನು ಮಾಡಿ, ದೋಷಾರೋಪಣ ಪತ್ರವನ್ನು ಸಲ್ಲಿಸಿದ್ದಾರೆ. ಅವರು ಈಗ ಮೃತರಾಗಿದ್ದಾರೆ.

47. ತನಿಖೆಯ ಸಮಯದಲ್ಲಿ ನನ್ನೊಂದಿಗೆ ದಾಳಿಗೆ ಬಂದ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಮತ್ತು ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡಿದ್ದೇನೆ. ಅದೇ ರೀತಿ ತನಿಖೆಯ ಸಮಯದಲ್ಲಿ ಕಾಲ ಕಾಲಕ್ಕೆ ಅವಶ್ಯಕತೆ ಇದ್ದ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡಿದ್ದೇನೆ.

ಪಾಟೀ ಸವಾಲುಃ ಆರೋಪಿ ಪರ ಃ ಶ್ರೀ ಕೆ.ಎಸ್.ಎಸ್.ಪಿ.ವಕೀಲರಿಂದಃ ವಕೀಲರು ಕಾಲಾವಕಾಶ ಕೋರುತ್ತಾರೆ, ಸಾಕ್ಷಿಯು ತಾನು, ತನ್ನ ತಾಯಿಯ ಚಿಕಿತ್ಸೆ ಕಾರಣ, ವಿದೇಶಕ್ಕೆ ಹೋಗುತ್ತಿದ್ದು, ಕಾರಣ ಸುಮಾರು 6 ತಿಂಗಳ ಕಾಲ ಮರಳಿ ಬರುವ ಸಾಧ್ಯತೆಗಳು ಇಲ್ಲ, ತಾನು ದಿನಾಂಕಃ29-02-2020 ರಂದು ವಿದೇಶಕ್ಕೆ ಹೋಗುತ್ತೇನೆ ಎಂದು ಹೇಳುತ್ತಾರೆ, ಕಾರಣ ದಿನಾಂಕಃ 26-02-2020 ಕ್ಕೆ ಮುಂದೂಡಲಾಯಿತು.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ.ಸ.ಇ.ಎ.ಒ.

Sd/-
(ಉಮೇಶ ಎಂ.ಅಡಿಗ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿ ಸಹಿಃ-
ಚ

ದಿನಾಂಕಃ 26-02-2020 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.
ಪಾಟೀ ಸವಾಲುಃ ಆರೋಪಿ ಪರ ಃ ಶ್ರೀ ಕೆ.ಎಸ್.ಎಸ್.ಪಿ.ವಕೀಲರಿಂದಃ

48. ನನಗೆ ತಮ್ಮ ಕಛೇರಿಗೆ ಬರಬೇಕೆಂದು ಎಸ್.ಪಿ. ಲೋಕಾಯುಕ್ತ, ಹಾಸನ ಫೋನ್ ಮಾಡಿ ತಿಳಿಸಿದ್ದರು. ನಿ.ಪಿ. 77 ನ್ನು ನನಗೆ ಬೆಳಿಗ್ಗೆ 8.00 ಗಂಟೆಯ ಸಮಯಕ್ಕೆ ಕೊಟ್ಟಿದ್ದಾರೆ. ಹಾಸನದಿಂದ ನಾನು ಮರಳಿ ಬಂದಾಗ ಬೆಳಿಗ್ಗೆ ಸುಮಾರು 9.00 ಗಂಟೆ ಆಗಿತ್ತು. ಆ ನಂತರ ಈ ಪ್ರಕರಣದ ಬಗ್ಗೆ ನಾನು ಹಾಸನಕ್ಕೆ ಹೋಗಿಲ್ಲ. ನಿ.ಪಿ. 77 ನ್ನು ಕೊಡುವುದಕ್ಕಿಂತ ಮೊದಲು ನನಗೆ ಸದರಿ ವರದಿಯ ಬಗ್ಗೆ ಮಾಹಿತಿ ಇರಲಿಲ್ಲ. ನಿ.ಪಿ. 77 ರೊಂದಿಗೆ ನನಗೆ ಬೇರೆ ಯಾವುದೇ ದಾಖಲೆಗಳನ್ನು ಕೊಟ್ಟಿರಲಿಲ್ಲ. ಆರೋಪಿ ಕೃಷಿಕ ಕುಟುಂಬದಿಂದ ಬಂದಿದ್ದಾರೆ. ಆರೋಪಿಗೆ ಸುಮಾರು 50 ರಿಂದ 60 ಎಕರೆ ಜಮೀನುಗಳು ಇದೆ ಎಂದರೆ ಸಾಕ್ಷಿಯು ಸುಮಾರು 40 ಎಕರೆ ಜಮೀನು ಇರಬಹುದು ಎಂದು ಹೇಳುತ್ತಾರೆ. ಆರೋಪಿಯ ಸಹೋದರರು ಸರ್ಕಾರಿ ನೌಕರಿಯಲ್ಲಿ ಇರುತ್ತಾರೆ. ದಿನಾಂಕಃ 15-09-2005 ರಲ್ಲಿ ಆರೋಪಿಯ ನೌಕರಿ ಖಾಯಂ ಆಗಿರುತ್ತದೆ.

49. ಚೆಕ್ ಪೀರಿಯಡ್‌ನ ಅವಧಿಗಿಂತ ಮೊದಲಿನ ಅವಧಿ ಎಂದರೆ ಆತನಿಗೆ ನೌಕರಿ ಖಾಯಂ ಆಗುವುದಕ್ಕಿಂತ ಮೊದಲಿನ ಅವಧಿ. ಆರೋಪಿಯ ನೌಕರಿ ಖಾಯಂ ಆಗುವುದಕ್ಕಿಂತ ಮೊದಲು ಆತ ಹೊಂದಿದ ಎಲ್ಲಾ ಚರ ಮತ್ತು ಸ್ಥಿರ

ಆಸ್ತಿಗಳನ್ನು ಚೆಕ್ ಅವಧಿಯ ಪೂರ್ವದಲ್ಲಿಯ ಆಸ್ತಿಗಳೆಂದು ಪರಿಗಣಿಸುತ್ತೇವೆ. ಅವುಗಳೆಂದರೆ, ಕೃಷಿ ಜಮೀನು, ಕಟ್ಟಡಗಳು, ನಿವೇಶನಗಳು, ಠೇವಣಿಗಳು, ಬ್ಯಾಂಕ್ ಖಾತೆಗಳು, ವಾಹನಗಳು, ಚಿನ್ನ ಮತ್ತು ಬೆಳ್ಳಿಯ ಆಭರಣಗಳು ಮತ್ತು ಗೃಹೋಪಯೋಗಿ ವಸ್ತುಗಳು, ಇತ್ಯಾದಿ ಸೇರುತ್ತವೆ. ಚೆಕ್ ಅವಧಿಯ ಪೂರ್ವದಲ್ಲಿ ಆರೋಪಿಯು ಹೊಂದಿದ ಆಸ್ತಿಗಳನ್ನು ಚೆಕ್ ಅವಧಿಯ ಅಂತ್ಯದಲ್ಲಿ ಆರೋಪಿ ಹೊಂದಿದ ಆಸ್ತಿಗಳ ಮೊತ್ತದಲ್ಲಿ ಕಳೆಯಬೇಕು ಎನ್ನುವುದು ನಿಜ. ಚೆಕ್ ಅವಧಿಗಿಂತ ಪೂರ್ವದಲ್ಲಿ ಹೊಂದಿದ ಆಸ್ತಿಯನ್ನು ಚೆಕ್ ಅವಧಿಯಲ್ಲಿ ಗಳಿಸಿದ ಆಸ್ತಿಯೊಂದಿಗೆ ಸೇರಿಸಬಾರದು ಎನ್ನುವುದು ನಿಜ. ಚೆಕ್ ಅವಧಿಯಲ್ಲಿ ಮಾಡಿದಂತಹ ಖರ್ಚಿನೊಂದಿಗೆ ಚೆಕ್ ಅವಧಿಗಿಂತ ಮೊದಲು ಮಾಡಿದ ಖರ್ಚಿನೊಂದಿಗೆ ಸೇರಿಸಲಾಗುವುದಿಲ್ಲ ಎನ್ನುವುದು ನಿಜ. ಚೆಕ್ ಅವಧಿಗಿಂತ ಮೊದಲು ಗಳಿಸಿದ ಕೃಷಿ ಆದಾಯವನ್ನು ಸಂಬಂಧಪಟ್ಟ ಆರೋಪಿಯ ಆದಾಯದೊಂದಿಗೆ ಸೇರಿಸಬಹುದು, ಸಾಕ್ಷಿ ಮುಂದುವರಿದು, ಆ ಬಗ್ಗೆ ಸೂಕ್ತ ಸಾಕ್ಷ್ಯಾಧಾರಗಳು ಇದ್ದಲ್ಲಿ ಮಾತ್ರ ಸೇರಿಸುತ್ತೇವೆ ಎಂದು ಹೇಳುತ್ತಾರೆ.

50. ನಿ.ಪಿ. 4 ರಲ್ಲಿ ಕಾಣಿಸಿದ ಗುಲ್ಬರ್ಗದ ದತ್ತ ನಗರದಲ್ಲಿ ಇರುವ ಆಸ್ತಿ, ಆರೋಪಿಯ ನೌಕರಿ ಖಾಯಂ ಆಗುವುದಕ್ಕಿಂತ ಮೊದಲು ಇದ್ದಂತಹ ಆಸ್ತಿ. ಸದರಿ ಆಸ್ತಿಯನ್ನು ಚೆಕ್ ಅವಧಿಯ ಆಸ್ತಿಯಲ್ಲಿ ಸೇರಿಸಲು ಆಗುವುದಿಲ್ಲ. ಬೆಂಗಳೂರಿನಲ್ಲಿ ವಸ್ತುಗಳಿಗಿಂತ ಗುಲ್ಬರ್ಗದಲ್ಲಿ ವಸ್ತುಗಳಿಗೆ ಅದರ ಅರ್ಧದಷ್ಟು ಬೆಲೆ ಬಾಳುತ್ತದೆ ಅಥವಾ ಬೆಂಗಳೂರಿನಲ್ಲಿ ಕಾಸ್ಟ್ ಆಫ್ ಲಿವಿಂಗ್ ಹೆಚ್ಚಾಗಿರುತ್ತದೆ. ಚೆಕ್ ಅವಧಿಗಿಂತ ಪೂರ್ವದಲ್ಲಿ ಮಾಡಿದ ಖರ್ಚನ್ನು ಚೆಕ್ ಅವಧಿಯ ಖರ್ಚಿಗೆ ಸೇರಿಸಲು ಆಗುವುದಿಲ್ಲ. 2006 ರಿಂದ

2013 ರವರೆಗಿನ ಆರೋಪಿಯ ಕೌಟುಂಬಿಕ ಖರ್ಚನ್ನು ಪರಿಗಣಿಸಬಹುದಾಗಿದೆ. ದೋಷಾರೋಪಣ ಪತ್ರದಲ್ಲಿ ಆರೋಪಿಯ ಕೌಟುಂಬಿಕ ಖರ್ಚನ್ನು ದಿನಾಂಕಃ 01-04-1992 ರಿಂದ 21-03-2013 ರವರೆಗೆ ರೂ.10,99,182/- ಎಂದು ಕಾಣಿಸಲಾಗಿದೆ. 2006 ಕ್ಕಿಂತ ಮೊದಲು ಕೌಟುಂಬಿಕ ಖರ್ಚನ್ನು ರೂ.10,99,182/-ರಲ್ಲಿ ಕಳೆಯಬೇಕಾಗುತ್ತದೆ ಎನ್ನುವುದು ನಿಜ, ಸಾಕ್ಷಿ ಮುಂದುವರಿದು, ಆ ಬಗ್ಗೆ ತನ್ನ ಬಳಿ ಲೆಕ್ಕಾಚಾರಗಳು ಇಲ್ಲದ ಕಾರಣ, ತಾನು ಎಷ್ಟು ಮೊತ್ತವನ್ನು ಅದರಿಂದ ಕಳೆಯಬೇಕಾಗುತ್ತದೆ ಎಂದು ಹೇಳಲಾಗುವುದಿಲ್ಲ ಎಂದು ಹೇಳುತ್ತಾರೆ. 1992 ರಿಂದ 2006 ರವರೆಗಿನ ಖರ್ಚನ್ನು ಕಳೆದರೆ ಚೆಕ್ ಅವಧಿಯಲ್ಲಿ ರೂ.5,72,596/- ಆಗುತ್ತದೆ ಎಂದರೆ ನನಗೆ ಹೇಳಲು ಸಾಧ್ಯವಿಲ್ಲ.

51. ನಿ.ಪಿ.4 ರಲ್ಲಿ ಗುಲ್ಬರ್ಗದ ದತ್ತ ನಗರದಲ್ಲಿರುವ ಮನೆಯನ್ನು 2002-03 ರಲ್ಲಿ ಕಟ್ಟಿದ್ದು, ಅದನ್ನು ಸಹಾ ಚೆಕ್ ಅವಧಿಯ ಒಳಗಿನ ಆಸ್ತಿಯ ಭಾಗ-2, ಕ್ರ.ಸಂ. 1 ರಲ್ಲಿ ಸೇರಿಸಲಾಗಿದೆ. ಚೆಕ್ ಅವಧಿಗಿಂತ ಮೊದಲು ಮನೆ ಕಟ್ಟಲು ಮಾಡಲಾದಂತಹ ಖರ್ಚುಗಳು, ವಿದ್ಯುತ್ ಬಿಲ್‌ನ್ನು ಚೆಕ್ ಅವಧಿಯ ಖರ್ಚಿನಲ್ಲಿ ಸೇರಿಸಲಾಗುವುದಿಲ್ಲ. ಚೆಕ್ ಅವಧಿಗಿಂತ ಮೊದಲು ಮಾಡಿದಂತಹ ಸಾಲವನ್ನು ಆಸ್ತಿಯ ಭಾಗದಲ್ಲಿ ಸೇರಿಸಲಾಗುವುದು. ಆಸ್ತಿ ಮತ್ತು ಸಾಲವನ್ನು ಒಟ್ಟಿಗೆ ಸೇರಿಸಿದಲ್ಲಿ ಅದು ದ್ವಿಗುಣಗೊಳ್ಳುತ್ತದೆ. ಒಂದೋ ಸಾಲ ಎಂದು ಪರಿಗಣಿಸಬೇಕು ಅಥವಾ ಆಸ್ತಿ ಎಂದು ಪರಿಗಣಿಸಬೇಕು. ದತ್ತ ನಗರದಲ್ಲಿ ಕಟ್ಟಿದಂತಹ ಮನೆಯ ಖರ್ಚು-ವೆಚ್ಚಗಳನ್ನು ಚೆಕ್ ಅವಧಿಯ ಆಸ್ತಿಯ ಭಾಗದಲ್ಲಿ ಸೇರಿಸಲು ಆಗುವುದಿಲ್ಲ.

52. ಚೆಕ್ ಅವಧಿಗಿಂತ ಮೊದಲು ಪಡೆದುಕೊಂಡ ಉಡುಗೊರೆಗಳನ್ನು ಚೆಕ್ ಅವಧಿಯ ಆಸ್ತಿಗಳಲ್ಲಿ ಸೇರಿಸಲಾಗುವುದಿಲ್ಲ ಎನ್ನುವುದು ಸರಿಯಲ್ಲ. ನೌಕರಿಗೆ ಸೇರುವಾಗ ಸರ್ಕಾರಿ ನೌಕರ ಉಡುಗೊರೆಯಾಗಿ ತನಗೆ ಬಂದ ಚಿನ್ನ ಮತ್ತು ಬೆಳ್ಳಿಯ ಆಭರಣಗಳ ಬಗ್ಗೆ ಆಸ್ತಿ ಮತ್ತು ದಾಯಿತ್ವಗಳ ಪಟ್ಟಿಯಲ್ಲಿ ಸೇರಿಸಿದಲ್ಲಿ ಅದನ್ನು ಚೆಕ್ ಅವಧಿಯ ಪೂರ್ವದಲ್ಲಿಯ ಆಸ್ತಿಗಳು ಎಂದು ಪರಿಗಣಿಸಬಹುದಾಗಿದೆ. ಚೆಕ್ ಅವಧಿಯಲ್ಲಿ ಸಿಕ್ಕಂತಹ ದವಸ -ಧಾನ್ಯಗಳನ್ನು ಒಂದು ವೇಳೆ ಅದು ಅವರಿಗೆ ಸೇರಿದ ಭೂಮಿಯಲ್ಲಿ ಬೆಳೆದಿದ್ದಲ್ಲಿ ಅದನ್ನು ಆಸ್ತಿಯ ಭಾಗದಲ್ಲಿ ಸೇರಿಸುತ್ತೇವೆ.

53. ಆದಾಯ ಪುಸ್ತಕದ ಪುಟ ಸಂ. 511 ರಿಂದ 568 ದಾಖಲೆಯನ್ನು ದಿನಾಂಕಃ 23-09-2013 ರಂದು ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಆಳಂದ, ಇವರಿಂದ ಪತ್ರದ ಮುಖೇನ ಪಡೆದುಕೊಂಡಿದ್ದೇನೆ. ಸದರಿ ಪುಸ್ತಕದಲ್ಲಿಯ ಪುಟ ಸಂ. 511 ರಿಂದ 568 ಕ್ಕೆ ಸೇರಿ ನಿಶಾನೆ ನಿ.ಪಿ. 103 ಎಂದು ಗುರುತಿಸಲಾಯಿತು. ನಿ.ಪಿ. 103 ರಲ್ಲಿ ಸಹಾಯಕ ಕೃಷಿ ನಿರ್ದೇಶಕರು ಕೃಷಿ ಉತ್ಪನ್ನದಲ್ಲಿಯ ಖರ್ಚನ್ನು ಕಳೆದು, ನಿವ್ವಳ ಉತ್ಪನ್ನವನ್ನು ಕಾಣಿಸಿದ್ದಾರೆ. ನಿ.ಪಿ. 103 ರ ಪ್ರಕಾರ ದಾಳಿಯ ಸಮಯದಲ್ಲಿ ದವಸ ಧಾನ್ಯಗಳು ಸಿಕ್ಕಿದ್ದು, ಅವುಗಳ ಮೊತ್ತ ರೂ. 2,51,417/- ಆಗಿದ್ದು, ಅದನ್ನು ಚೆಕ್ ಅವಧಿಯ ಆಸ್ತಿಯ ವಿವರ ಸ್ಟೇಟ್‌ಮೆಂಟ್-ಬಿದಲ್ಲಿ ಭಾಗ-10 ರ ಕ್ರ.ಸಂ. 2 ಬಿದಲ್ಲಿ ಕಾಣಿಸಲಾಗಿದೆ. ಅದನ್ನು ಆಸ್ತಿಯ ಭಾಗದಲ್ಲಿ ಕಾಣಿಸಿರುವುದು ತಪ್ಪು ಎನ್ನುವುದು ನಿಜ, ಅದನ್ನು ಆದಾಯಕ್ಕೆ ಪರಿಗಣಿಸಬೇಕಾಗಿತ್ತು.

54. ಆರೋಪಿಯು ಕೃಷಿ ಕುಟುಂಬದಿಂದ ಬಂದ ಕಾರಣ, ಆತನ ಜೀವನ ನಿರ್ವಹಣೆಗೆ ಕೃಷಿಯಿಂದ ಬಂದ ಉತ್ಪನ್ನ ಸಾಕಾಗುತ್ತಿತ್ತು. ಚೆಕ್ ಅವಧಿಯ

ಪೂರ್ವದಲ್ಲಿ ಆರೋಪಿಗೆ ತಾತ್ಕಾಲಿಕ ದಿನಗೂಲಿ ನೌಕರನಾಗಿ ಗಳಿಸಿದ ಉತ್ಪನ್ನವನ್ನು ಆದಾಯಕ್ಕೆ ತೆಗೆದುಕೊಳ್ಳಬೇಕು ಎಂದರೆ ಸಾಕ್ಷಿಯು ಆ ವಿಷಯ ತನಿಖಾಧಿಕಾರಿ ವಿವೇಚನೆಗೆ ಬಿಟ್ಟಿದ್ದು, ಆ ರೀತಿ ಬಂದ ಉತ್ಪನ್ನವನ್ನು ಖರ್ಚು ಮಾಡಿದ್ದಾನೆ ಎಂದು ಕಂಡು ಬಂದಲ್ಲಿ ಅದನ್ನು ಕೈ ಬಿಡಬಹುದಾಗಿದೆ. ದೋಷಾರೋಪಣ ಪತ್ರದ ಸ್ಟೇಟ್‌ಮೆಂಟ್-ಎ ದಲ್ಲಿ ಚೆಕ್ ಅವಧಿಯ ಪೂರ್ವದಲ್ಲಿಯ ಆರೋಪಿಯ ಉತ್ಪನ್ನವನ್ನು ಅಂದರೆ ಕ್ರ.ಸಂ. 12(1)ರಲ್ಲಿಯ ದಿನಗೂಲಿ ನೌಕರನಿಗೆ ಬಂದ ಸಂಬಳವನ್ನು ಯಾವ ಕಾರಣದಿಂದ ಕಡಿತ ಮಾಡಿದ್ದಾರೆ ಎಂದು ಅದರಲ್ಲಿ ಕಾಣಿಸಿಲ್ಲ.

55. ಸಂಬಂಧಿಸಿದ ಸರ್ಕಾರಿ ನೌಕರನಿಗೆ ಹಳೇ ಮನೆ ಇದ್ದಲ್ಲಿ ಅದನ್ನು ಬೀಳಿಸಿದಾಗ ಅದರಲ್ಲಿಯ ಮರ ಮುಟ್ಟುಗಳಿಗೆ ಆ ಸಮಯದಲ್ಲಿ ಹೆಚ್ಚು ಬೆಲೆ ಬಾಳುತ್ತದೆ ಎಂದರೆ ಸಾಕ್ಷಿಯು, ಸದರಿ ಮರದ ಜಾತಿ ಮತ್ತು ಅದರ ಗಾತ್ರ ಅವಲಂಬಿಸಿರುತ್ತದೆ ಎಂದು ಹೇಳುತ್ತಾರೆ. ಮರ ಮುಟ್ಟುಗಳನ್ನು ಮಾರಾಟ ಮಾಡಿದಾಗ ಆ ಬಗ್ಗೆ ಸೂಕ್ತ ದಾಖಲೆಗಳು ಇದ್ದಲ್ಲಿ ಆ ರೀತಿ ಬಂದ ಉತ್ಪನ್ನವನ್ನು ಆದಾಯದ ಭಾಗದಲ್ಲಿ ಸೇರಿಸುತ್ತೇವೆ. ಸಂಬಂಧಿಸಿದ ಸರ್ಕಾರಿ ನೌಕರ ತನ್ನ ಹಳೆಯ ಮನೆಯನ್ನು ಬೀಳಿಸಿ, ಅದರಲ್ಲಿ ಬಂದಂತಹ ಮರ ಮುಟ್ಟುಗಳನ್ನು ಮಾರಾಟ ಮಾಡಿದ್ದೇನೆ ಎಂದು ಹೇಳಿದಲ್ಲಿ ಆ ಬಗ್ಗೆ ಪರಿಗಣಿಸಬೇಕಾಗುತ್ತದೆ ಎಂದರೆ ಸಾಕ್ಷಿಯು, ಅದು ತನಿಖಾಧಿಕಾರಿಯ ವಿವೇಚನೆಗೆ ಬಿಟ್ಟಿದ್ದು ಎಂದು ಹೇಳುತ್ತಾರೆ. ಒಂದು ವೇಳೆ ತನಿಖಾಧಿಕಾರಿ ಅಂತಹ ಆದಾಯವನ್ನು ಕೈ ಬಿಟ್ಟಲ್ಲಿ ಆ ಬಗ್ಗೆ ಕಾರಣವನ್ನು ಕೊಡಬೇಕಾಗುತ್ತದೆ. ಆರೋಪಿಯಿಂದ ಹಳೆಯ ಮರು ಮುಟ್ಟುಗಳನ್ನು ಖರೀದಿ ಮಾಡಿದ ಬಗ್ಗೆ ಕಂಟ್ರ್ಯಾಕ್ಟರ್ ಶಿವಪತ್ರಪ್ಪ ವರದಿ ನೀಡಿರಬಹುದು. ಅದು ಆದಾಯ ಪುಸ್ತಕದ

ಪುಟ ಸಂ. 694 ರಲ್ಲಿ ಕಾಣಿಸುತ್ತದೆ. ಅದರ ಪ್ರಕಾರ ಮರ ಮುಟ್ಟುಗಳನ್ನು ಖರೀದಿಸಿ ಆರೋಪಿಗೆ ರೂ. 1,98,580/-ಗಳನ್ನು ಕೊಡಲಾಗಿದೆ ಎಂದು ಕಾಣಿಸಲಾಗಿದೆ.

56. ಸಂಬಂಧಿಸಿದ ಸರ್ಕಾರಿ ಅಧಿಕಾರಿ ಇಂಜಿನಿಯರ್ ಆಗಿದ್ದು, ಕೃಷಿ ಭೂಮಿಯಲ್ಲಿ ಸಿಕ್ಕಂತಹ ಮರ ಮುಟ್ಟುಗಳನ್ನು ಉಪಯೋಗಿಸಿ, ಮನೆ ಕಟ್ಟಿದಲ್ಲಿ ಬೇರೆಯವರು ಕಟ್ಟಿದ್ದಕ್ಕಿಂತ ಶೇಕಡಾ-30 ರಷ್ಟು ಬೆಲೆ ಕಡಿಮೆಯಾಗುತ್ತದೆ ಎಂದರೆ ನನಗೆ ಹೇಳಲು ಸಾಧ್ಯವಿಲ್ಲ. ಬೆಂಗಳೂರಿನಲ್ಲಿ ಮನೆ ಕಟ್ಟುವುದಕ್ಕೂ ಹಾಗೂ ಹಳ್ಳಿಗಳಲ್ಲಿ ಮನೆ ಕಟ್ಟುವುದಕ್ಕೂ ಮನೆ ಕಟ್ಟುವ ಖರ್ಚಿನಲ್ಲಿ ಶೇಕಡಾ 40 ರಷ್ಟು ಕಡಿಮೆಯಾಗುತ್ತದೆ ಎನ್ನುವುದು ನಿಜ. ಮನೆ ಕಟ್ಟಬೇಕಾದಲ್ಲಿ ಸಂಬಂಧಪಟ್ಟ ಇಂಜಿನಿಯರ್ ನಿಂದ ಅಂದಾಜು ಖರ್ಚು ವೆಚ್ಚ ಪಟ್ಟಿಯನ್ನು ಬೆಂಗಳೂರಿನಲ್ಲಿ ಪಡೆದುಕೊಳ್ಳಬೇಕಾಗುತ್ತದೆ.

57. ಆರೋಪಿ ಕುಟುಂಬಕ್ಕೆ ಸೇರಿರದಂತಹ ಆಸ್ತಿಗಳನ್ನು ಆರೋಪಿಯ ಆಸ್ತಿಯ ಪಟ್ಟಿಯಲ್ಲಿ ಸೇರಿಸಲು ಆಗುವುದಿಲ್ಲ. ನಿ.ಪಿ. 63 ರಲ್ಲಿಯ ಮನೆ ಅರ್ಜುನ ಬಿನ್ ಶಿವರಾಯಪ್ಪ ಎನ್ನುವವರಿಗೆ ಸೇರಿದ್ದು, ಸದರಿ ಆಸ್ತಿ ಆರೋಪಿಗೆ ಸೇರಿದ್ದು ಅಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ಅದರ ಬಗ್ಗೆ ತನಿಖೆ ಮಾಡಿಲ್ಲ. ಸದರಿ ಆಸ್ತಿ ಆರೋಪಿಯ ಕುಟುಂಬಕ್ಕೆ ಸೇರಿದ ಬಗ್ಗೆ ನಾನು ನೋಡಿರುವುದಿಲ್ಲ. ಆರೋಪಿಯ ಕುಟುಂಬದಲ್ಲಿ ಒಟ್ಟು 4 ಜನ ಇದ್ದು, ಆರೋಪಿ, ಆತನ ಪತ್ನಿ ಶ್ರೀಮತಿ ಗಾಯತ್ರಿ, ಅನಿಲ್ ಕುಮಾರ ಎನ್ನುವ ಮಗ, ಮತ್ತು ರಾಧಿಕಾ ಎನ್ನುವ ಮಗಳು ಇದ್ದಾರೆ. ನಿ.ಪಿ. 63 ಸದರಿ 4 ಜನರ ಹೆಸರಿನಲ್ಲಿ ಇಲ್ಲ.

58. ಸಾಲವನ್ನು ಮಾಡಿ ಆಸ್ತಿಯನ್ನು ಖರೀದಿಸಿದಾಗ, ಸಾಲದ ಸಂಪೂರ್ಣ ಮೊತ್ತ

ಮತ್ತು ಆಸ್ತಿಯ ಬೆಲೆಯನ್ನು ಒಟ್ಟಿಗೆ ತೋರಿಸಲು ಆಗುವುದಿಲ್ಲ, ಸಾಕ್ಷಿ ಮುಂದುವರಿದು, ಸಾಲವನ್ನು ಆದಾಯದ ಭಾಗದಲ್ಲಿ ಹಾಗೂ ಆಸ್ತಿಯನ್ನು ಆಸ್ತಿಯ ಭಾಗದಲ್ಲಿ ತೋರಿಸಬೇಕಾಗುತ್ತದೆ ಎಂದು ಹೇಳುತ್ತಾರೆ. ಆರೋಪಿಯ ಹೆಸರಿನಲ್ಲಿ ಇಲ್ಲದ ವಾಹನಗಳನ್ನು ಆಸ್ತಿಯ ಭಾಗದಲ್ಲಿ ಆತನ ಹೆಸರಿನಲ್ಲಿ ತೋರಿಸಲು ಆಗುವುದಿಲ್ಲ. ಬೊಲೇರೋ ವಾಹನ ಸಂ. ಕೆಎ-32/ಎಂ-8252 ವಾಹನವನ್ನು ರಾಜಕುಮಾರ ಎನ್ನುವವರಿಂದ ಶಿವಕುಮಾರ ಬಿನ್ ಬಾಲಚಂದ್ರ ಹೊನ್ನಾಡೆ ಎನ್ನುವವರು ಖರೀದಿಸಿದ್ದು, ಆ ಬಾಬ್ತು ರೂ.2,50,000/- ಕೊಟ್ಟಿದ್ದು, ಬಾಕಿ ರೂ.1,00,000/- ಸಾಲವೆಂದು ಉಳಿದಿದೆ ಎಂದು ತನಿಖಾಧಿಕಾರಿಯ ಮುಂದೆ ಶಿವಕುಮಾರ ಹೇಳಿಕೆ ಕೊಟ್ಟಿದ್ದಾರೆ. ಸದರಿ ವಾಹನದ ಎಲ್ಲಾ ದಾಖಲೆಗಳು ಅಂದರೆ ನಿ.ಪಿ.38 ಶಿವಕುಮಾರನ ಹೆಸರಿನಲ್ಲಿ ಇದೆ. ನನಗೆ ತಿಳಿದ ಮಟ್ಟಿಗೆ ದಾಖಲೆಗಳ ಆಧಾರದಿಂದ ಅದು ಆರೋಪಿಗೆ ಸಂಬಂಧಿಸಿದ್ದು ಅಲ್ಲ.

(ಈ ಹಂತದಲ್ಲಿ ಸಂಜೆ 4.50 ಗಂಟೆ ಆದ ಕಾರಣ, ಆರೋಪಿ ಪರ ವಕೀಲರು ಈ ಪ್ರಕರಣದಲ್ಲಿ ತನಿಖಾಧಿಕಾರಿ ಮೃತನಾಗಿದ್ದ ಕಾರಣ ಹೆಚ್ಚಿನ ವಿಷಯಗಳನ್ನು ಈ ಸಾಕ್ಷಿಗೆ ಕೇಳಬೇಕಾಗಿದ್ದು, ಸದರಿ ಪಾಟೀ ಸವಾಲಿಗಾಗಿ ಕನಿಷ್ಠ 2 ದಿನಗಳ ಅವಧಿ ಬೇಕಾಗುತ್ತದೆ ಎಂದು ಹೇಳಿದ್ದಾರೆ, ಸಾಕ್ಷಿಯು ತಾನು ದಿನಾಂಕಃ 29-02-2020 ರಂದು ವಿದೇಶಕ್ಕೆ ಹೊರಟಿದ್ದು, ಕಾರಣ ನಾಳೆಯೂ ಸಹಾ ಸಾಕ್ಷಿಯನ್ನು ಹೇಳಲು ಕಷ್ಟ ಸಾಧ್ಯ ಎಂದು ಹೇಳುತ್ತಾರೆ, ಒಂದು ವೇಳೆ ಸಾಕ್ಷಿ ಪಾಟೀ ಸವಾಲಿಗೆ ನ್ಯಾಯಾಲಯಕ್ಕೆ ಸ್ವತಃ ಬರಲು ಸಾಧ್ಯವಿಲ್ಲದಿದ್ದಲ್ಲಿ ವಿಡಿಯೋ ಕಾನ್ಫರೆನ್ಸ್ ಮೂಲಕ ಅದನ್ನು ಪಡೆದುಕೊಳ್ಳಲು ಸಾಧ್ಯವಿದ್ದಲ್ಲಿ ಪಡೆದುಕೊಳ್ಳಲಾಗುವುದು ಮತ್ತು ಪಾಟೀ ಸವಾಲನ್ನು ಮುಂದೂಡಲಾಯಿತು.)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ.ಸ.ಇ.ಎ.ಒ.
Sd/-
(ಉಮೇಶ ಎಂ.ಅಡಿಗ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿ ಸಹಿಃ-

ಚ

ದಿನಾಂಕಃ 22-02-2021 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲುಃ ಆರೋಪಿ ಪರ ಃಶ್ರೀ ಕೆ.ಎಸ್.ಎಸ್ ಪಿ ವಕೀಲರಿಂದಃ

59. ಕೃಷಿಯಿಂದ ಬಂದ ಆದಾಯವನ್ನು ಶೆಡ್ಯೂಲ್-ಎ ನಲ್ಲಿ ಸೇರಿಸಬೇಕು ಎನ್ನುವುದು ಸರಿ. ದೋಷಾರೋಪಣ ಪಟ್ಟಿಯಲ್ಲಿ ಕೃಷಿಯಿಂದ ಬಂದ ಆದಾಯವನ್ನು ತೋರಿಸಿಲ್ಲ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ಕೆಲವು ಕೃಷಿ ಆದಾಯವನ್ನು ಸೇರಿಸಲಾಗಿದೆ, ಕೆಲವನ್ನು ಸೇರಿಸಿಲ್ಲ ಎಂದು ಹೇಳಿರುತ್ತಾರೆ. ನನಗೆ ಗೊತ್ತಿರುವ ಹಾಗೆ ಆರೋಪಿಯು ಕೃಷಿ ಕುಟುಂಬಕ್ಕೆ ಸೇರಿದವನು ಎನ್ನುವುದು ಸರಿ. ರೂ.5,26,830/-ಗಳ ಸಂಬಳದ ಹಣವನ್ನು ಎ-ಶೆಡ್ಯೂಲ್ ನಲ್ಲಿ ಕಾಣಿಸಿಲ್ಲ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ನಾನು ದಾಖಲೆ ಆಧಾರದ ಮೇಲೆ ಮಾತ್ರ ಹೇಳುತ್ತಿದ್ದೇನೆ, ಅದರಲ್ಲಿ ಸೇರಿಸಿಲ್ಲ ಎಂದು ಹೇಳಿರುತ್ತಾರೆ. ಅದನ್ನು ಸೇರಿಸಬೇಕಾಗಿತ್ತು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ಅದನ್ನು ಏಕೆ ಸೇರಿಸಿಲ್ಲ ಎಂದು ನನಗೆ ಗೊತ್ತಿಲ್ಲ ಎಂದು ಹೇಳಿರುತ್ತಾರೆ.

ಪ್ರಶ್ನೆಃ ಸೇರಿಸದೆ ಇರುವುದಕ್ಕೆ ಯಾವ ಕಾರಣಗಳನ್ನು ಕೊಟ್ಟಿದ್ದಾರೆ, ತನಿಖೆಯಲ್ಲಿ ವ್ಯಕ್ತವಾಗಿಲ್ಲ.

ಉತ್ತರಃ ಅದನ್ನು ಏಕೆ ಬಿಟ್ಟಿದ್ದಾರೆಂದು ನನಗೆ ಗೊತ್ತಿಲ್ಲ, ದೋಷಾರೋಪಣ ಪಟ್ಟಿ ಸಲ್ಲಿಸಿರುವುದು ಚಾಸಾ-108.

(ಈ ಸಮಯದಲ್ಲಿ ಮಧ್ಯಾಹ್ನ 1.20 ಗಂಟೆ ಆಗಿದ್ದು, ಲೋಕ್ ಅದಾಲತ್ ಸಹಾ ಇದ್ದು, ಮುಂದಿನ ಪಾಟೀ ಸವಾಲಿಗೆ ಮುಂದೂಡಲಾಗಿದೆ.)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ.ಸ.ಇ.ಎ.ಒ.

Sd/-

(ಶುಭ ಗೌಡರ್)

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಚಿಕ್ಕಮಗಳೂರು.

ಸಾಕ್ಷಿ ಸಹಿಃ-

ಚ

ದಿನಾಂಕಃ 04-08-2023 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲುಃ ಆರೋಪಿ ಪರ ಃಶ್ರೀ ಕೆ.ಎಸ್.ಎಸ್ ಪಿ ವಕೀಲರಿಂದಃ

60. ಚೆಕ್ ಅವಧಿಗಿಂತ ಮೊದಲು ಮಾಡಿದಂತಹ ಸಾಲವನ್ನು ಆದಾಯದಲ್ಲಿ ಸೇರಿಸಲಾಗುವುದು ಎನ್ನುವುದು ಸರಿ. ಚೆಕ್ ಅವಧಿಯಲ್ಲಿ, ಭೂಮಿಯಲ್ಲಿ ಬೆಳೆದಿದ್ದಂತಹ ದವಸ ಧಾನ್ಯಗಳನ್ನು ಆದಾಯ ಭಾಗದಲ್ಲಿ ಸೇರಿಸುತ್ತೀರಿ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ಸೇರಿಸುವುದಕ್ಕಿಂತ ಮೊದಲು ಸಂಬಂಧಪಟ್ಟ ಕೃಷಿ ಅಧಿಕಾರಿಗಳಿಂದ ಈ ದವಸ ಧಾನ್ಯ ಬೆಳೆಯಲು ಎಷ್ಟು ಖರ್ಚಾಗಬಹುದು ಎನ್ನುವ ಬಗ್ಗೆ ಪಡೆದು, ಆ ಖರ್ಚಿನ ಹಣವನ್ನು ಉತ್ಪನ್ನದ ಹಣದಲ್ಲಿ ಕಳೆದು ಉಳಿದದ್ದನ್ನು ಆದಾಯ ಎಂದು ಕಾಣಿಸುತ್ತೇವೆ ಎಂದು ಹೇಳಿರುತ್ತಾರೆ.

61. ಆರೋಪಿಯು ಕೃಷಿ ಕುಟುಂಬಕ್ಕೆ ಸೇರಿದವರು ಎಂದು ತನಿಖಾ ಕಾಲದಲ್ಲಿ ಕಂಡು ಬಂದಿದೆ ಎನ್ನುವುದು ಸರಿ. ಆರೋಪಿಯು ಪರಿಶಿಷ್ಟ ಪಂಗಡಕ್ಕೆ ಸೇರಿದವರು ಎನ್ನುವುದು ಸರಿ. ಪರಿಶಿಷ್ಟ ಪಂಗಡಕ್ಕೆ ಸೇರಿದವರ ಮಕ್ಕಳಿಗೆ ವಿಧ್ಯಾಭ್ಯಾಸಕ್ಕೆಂದು scholarship ಇರುತ್ತದೆ ಎನ್ನುವುದು ಸರಿ. ಚೆಕ್ ಅವಧಿಗಿಂತ ಮೊದಲಿನ ಅವಧಿಗೆ ಸಂಬಂಧಪಟ್ಟಂತೆ ಕೃಷಿ ಭೂಮಿಯಿಂದ ಬರುವ ಆದಾಯವನ್ನು ಪರಿಗಣಿಸಬೇಕಾಗುತ್ತದೆ ಎನ್ನುವುದು ಸರಿ. ನಿ.ಪಿ.103 ರಲ್ಲಿ 1975 ನೇ ಇಸ್ವಿಯಿಂದಲೂ ಕೃಷಿ ಭೂಮಿಯಿಂದ ಆರೋಪಿಗೆ ಎಷ್ಟು ಆದಾಯ ಇತ್ತು ಎನ್ನುವ ಬಗ್ಗೆ ಕಾಣಿಸಿದೆ ಎನ್ನುವುದು ಸರಿ. ಈ ಆದಾಯವನ್ನು ಅಂದರೆ ಚೆಕ್ period ಗಿಂತ ಮೊದಲಿನ period ಗೆ ಸಂಬಂಧಪಟ್ಟ ಕೃಷಿ ಭೂಮಿಯಿಂದ ಬಂದ ಆದಾಯವನ್ನು Statement -A ನಲ್ಲಿ ಕಾಣಿಸಲಾಗುತ್ತದೆ ಎನ್ನುವುದು ಸರಿ.

62. ಬಂಗಾರ, ಬೆಳ್ಳಿ ಏನಾದರೂ ನೌಕರನಿಗೆ ಉಡುಗೊರೆಯಾಗಿ ಬಂದಿದ್ದಲ್ಲಿ, ಅದನ್ನು Assets and liabilities ನಲ್ಲಿ ಕಾಣಿಸಿದ್ದರೆ ಅದನ್ನು ಸಹಾ ಪರಿಗಣಿಸಬೇಕಾಗುತ್ತದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ಆ ಬಗ್ಗೆ ರಸೀದಿಗಳು ಇವೆಯೇ ಎನ್ನುವುದನ್ನೂ ಸಹಾ ಪರಿಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ ಎಂದು, ಯಾರು

ಕೊಟ್ಟಿದ್ದು ಎನ್ನುವುದನ್ನು ಸಹಾ ನೋಡಬೇಕಾಗುತ್ತದೆ ಎಂದು ಹೇಳಿರುತ್ತಾರೆ, ಸಾಕ್ಷಿದಾರರು ಮುಂದುವರಿದು income tax returns ನಲ್ಲಿ ಸಹಾ ಕಾಣಿಸಿರಬೇಕಾಗುತ್ತದೆ ಎಂದು, ಅದನ್ನು ಆಸ್ತಿ ಎಂದು ತೋರಿಸಬೇಕು ಎಂದು ಹೇಳಿರುತ್ತಾರೆ.

63. ನಿ.ಪಿ.16 ರಲ್ಲಿ, ಆರೋಪಿಯು ತಮ್ಮ ಬಳಿ ಇದ್ದ ಬಂಗಾರ ಮತ್ತು ಬೆಳ್ಳಿ ಸಾಮಾನುಗಳ ಬಗ್ಗೆ ಕಾಣಿಸಿದ್ದಾರೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು 2007, 2008 ಮತ್ತು 2009 ನೇ ಸಾಲಿಗೆ ಸಂಬಂಧಪಟ್ಟಂತೆ ಕಾಣಿಸಿದ್ದಾರೆ ಎಂದು ಹೇಳಿರುತ್ತಾರೆ. Income tax returns ನಲ್ಲಿ ಬಂಗಾರ ಮತ್ತು ಬೆಳ್ಳಿ ಸಾಮಾನುಗಳನ್ನು ಪಡೆದಲ್ಲಿ ಅವುಗಳನ್ನು ಕಾಣಿಸುವ ಅವಶ್ಯಕತೆ ಇರುವುದಿಲ್ಲ ಎನ್ನುವುದು ಸರಿಯಲ್ಲ. ಕೃಷಿಯಿಂದ ಬಂದ ಆದಾಯದ ಬಗ್ಗೆ income tax returns ನಲ್ಲಿ ಕಾಣಿಸುವ ಅವಶ್ಯಕತೆ ಇಲ್ಲ ಎನ್ನುವುದು ಸರಿಯಲ್ಲ.

64. ದಿನಾಂಕಃ 01-05-1992 ರಿಂದ 05-09-2005 ರವರೆಗೆ ಪಡೆದಂತಹ ವೇತನವನ್ನು ಚೆಕ್ ಪೂರ್ವ ಅವಧಿಗೆ ಸಂಬಂಧಪಟ್ಟಂತೆ Statement-A ನಲ್ಲಿಕಾಣಿಸಬೇಕು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ಹೌದು ಎಂದು ಹೇಳಿ, ಮುಂದುವರಿದು ಈ ಅವಧಿಗೆ ಸಂಬಂಧಪಟ್ಟಂತೆ Statistical Officer ರಿಂದ ಆ ವ್ಯಕ್ತಿಯ ಕುಟುಂಬದ ಸದಸ್ಯರು ಎಷ್ಟು ಜನ ಇದ್ದರು, ಅವರಿಗೆ ಎಷ್ಟು ಖರ್ಚಾಗಿದೆ ಎನ್ನುವ ಮಾಹಿತಿಯನ್ನು ಪಡೆದು ಅದನ್ನು ಸಹಾ ಗಣನೆಗೆ ತೆಗೆದುಕೊಳ್ಳಬೇಕು ಎಂದು ಹೇಳಿರುತ್ತಾರೆ.

65. ನೌಕರನು ಪಡೆದಂತಹ ವೇತನವನ್ನು Statement-A ನಲ್ಲಿ ಪರಿಗಣಿಸದೇ ಇದ್ದಾಗ, ಈ ವೇತನವನ್ನು ಆದಾಯ ಎಂದು ಏಕೆ ಪರಿಗಣಿಸಿಲ್ಲ ಎಂದು ವಿವರವನ್ನು ಕೊಡಬೇಕಾಗುತ್ತದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ಹೌದು ಎಂದು ಹೇಳಿರುತ್ತಾರೆ. ಕೃಷಿಯಿಂದ ಆರೋಪಿಗೆ ಆದಾಯ ಬಂದಿದ್ದರಿಂದ, ನೌಕರಿಯಿಂದ ಬಂದ ವೇತನ ಸಂಪೂರ್ಣವಾಗಿ ಉಳಿಯುತ್ತದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ಹಾಗೇ ಉಳಿಯುತ್ತದೆ ಎಂದು ಹೇಳಲು ಬರುವುದಿಲ್ಲ ಎಂದು, ಆ ನೌಕರನ ಖರ್ಚುಗಳನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ, Statistical Officer ರಿಂದ ಅದನ್ನು ಪಡೆಯುತ್ತೇವೆ ಎಂದು, ತನಿಖಾಧಿಕಾರಿಯು ದೋಷಾರೋಪಣ ಪತ್ರ ಸಲ್ಲಿಸುವ ಮೊದಲು ಸಹಾ ಹಬ್ಬ

ಹರಿದಿನಗಳಿದ್ದಲ್ಲಿ, ಆ ಕುಟುಂಬದಲ್ಲಿ ಮದುವೆ ಸಮಾರಂಭಗಳು ಆಗಿದ್ದರಲ್ಲಿ ಅವುಗಳ ಖರ್ಚನ್ನೂ ಸಹಾ ಗಣನೆಗೆ ತೆಗೆದುಕೊಳ್ಳುತ್ತಾರೆ. ಈ ಬಗ್ಗೆ ತನಿಖೆಯಲ್ಲಿ ಸ್ಪಷ್ಟವಾಗಿ ವ್ಯಕ್ತಪಡಿಸಬೇಕು ಎನ್ನುವುದು ಸರಿ.

66. ಸಂಪೂರ್ಣವಾಗಿ ದೋಷಾರೋಪಣ ಪತ್ರವನ್ನು ಪರಿಶೀಲಿಸಿದ್ದೀರಿ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ನಾನು ಮಾಡಿದ ತನಿಖೆಗೆ ಸಂಬಂಧಪಟ್ಟಂತೆ ನನಗೆ ಸಂಪೂರ್ಣ ಮಾಹಿತಿ ಇದೆ ಎಂದು ಹೇಳಿರುತ್ತಾರೆ.

67. ದತ್ತನಗರದಲ್ಲಿ ಇದ್ದ ಮನೆಯಲ್ಲಿನ furnitures, electronic goods, ಮತ್ತು ಇತರ ಗೃಹ ಬಳಕೆ ವಸ್ತುಗಳ ಬಗ್ಗೆ Statement-A ನಲ್ಲಿ ಕಾಣಿಸಬೇಕು, ಚೆಕ್ ಅವಧಿಗಿಂತ ಪೂರ್ವದಲ್ಲಿ ಅಂದರೆ ನೌಕರಿ ಖಾಯಂ ಆಗುವುದಕ್ಕಿಂತ ಪೂರ್ವದಲ್ಲಿ ಈ ಮನೆಯನ್ನು ಕಟ್ಟಿಸಿರುವುದರಿಂದ Statement-A ನಲ್ಲಿ ಕಾಣಿಸಬೇಕಾಗುತ್ತದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ಆ ರೀತಿ ಮಾಡಲಾಗುವುದಿಲ್ಲ ಎಂದು, ನೌಕರನೇ ಯಾವ ಯಾವ ವಸ್ತುಗಳನ್ನು ಯಾವ ಅವಧಿಯಲ್ಲಿ ತೆಗೆದುಕೊಂಡಿತ್ತು ಎಂದು, ಮತ್ತು ಅದರ ಬೆಲೆ ಮತ್ತು ರಸೀದಿಗಳನ್ನು ಕೊಡಬೇಕು ಎಂದು, ಅದರ ಆಧಾರದ ಮೇಲೆ ಮಾತ್ರ ಚೆಕ್ ಅವಧಿಗಿಂತ ಪೂರ್ವಕ್ಕೆ ಸಂಬಂಧಪಟ್ಟಿದ್ದಲ್ಲಿ ಮಾತ್ರ Statement-A ನಲ್ಲಿ ಕಾಣಿಸಲಾಗುತ್ತದೆ ಎಂದು ಹೇಳಿರುತ್ತಾರೆ, Statement-A ನಲ್ಲಿ ಏಕೆ ಕಾಣಿಸಿಲ್ಲ ಎಂದು ವಿವರವನ್ನು ತನಿಖಾಧಿಕಾರಿ ಕೊಡಬೇಕಾಗುತ್ತದೆ ಎನ್ನುವುದು ಸರಿ.

68. ನಗರ ಪ್ರದೇಶದಲ್ಲಿ ಮನೆಯನ್ನು ಹೊಸದಾಗಿ ಕಟ್ಟಿಸಿದಾಗ ಮೇಲೆ ಹೇಳಿದಂತಹ furnitures, electronic goods, ಮತ್ತು ಇತರ ಗೃಹ ಬಳಕೆ ವಸ್ತುಗಳನ್ನು ಆಗ ತೆಗೆದುಕೊಳ್ಳುತ್ತಾರೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ಹಾಗೇನು ಇಲ್ಲ, ಆಗ ಖರೀದಿ ಮಾಡಿದ್ದಲ್ಲಿ ರಸೀದಿಗಳನ್ನು ಕೊಡಬೇಕಾಗುತ್ತದೆ ಎಂದು ಹೇಳಿರುತ್ತಾರೆ. ನೌಕರನಿಗಾಗಲೀ, ನೌಕರನ ಕುಟುಂಬಕ್ಕಾಗಲೀ ಸಂಬಂಧಪಡದೇ ಇರುವ ಆಸ್ತಿಗಳನ್ನು ನೌಕರನಿಗೆ ಸಂಬಂಧಪಟ್ಟ ಆಸ್ತಿಗಳೊಂದಿಗೆ ಸೇರಿಸಲು ಬರುವುದಿಲ್ಲ ಎನ್ನುವುದು ಸರಿ.

69. ನೀವು ಮಾಡಿದ ತನಿಖೆ ಪ್ರಕಾರ ಆರೋಪಿಯ ಕುಟುಂಬದಲ್ಲಿ ಆರೋಪಿ , ಆರೋಪಿಯ ಪತ್ನಿ ಗಾಯತ್ರಿ, ಒಬ್ಬ ಮಗಳು ರಾಧಿಕ, ಮತ್ತು ಒಬ್ಬ ಮಗ ಅನಿಲ್ ಇಷ್ಟು ಜನ ಮಾತ್ರ ಇರುವುದು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ಅಷ್ಟು ಜನ ಅವರ

ಕುಟುಂಬದಲ್ಲಿ ಇರಬಹುದು, ಆದರೆ ನಾವು ರೇಡ್ ಮಾಡಿದಾಗ ಬೇರೆಯವರೂ ಸಹಾ ಮನೆಯಲ್ಲಿ ಇದ್ದರು ಎಂದು, ಅವರನ್ನು ಆರೋಪಿಯು ಸಾಕುತ್ತಿದ್ದಾರೆ ಎಂದು ಹೇಳಿದರು ಎಂದು ಹೇಳಿರುತ್ತಾರೆ.

70. ದಿನಾಂಕಃ 21-03-2013 ರಂದಾಗಲೀ, 21-03-2013 ರಿಂದ 25-03-2013 ರವರೆಗಿನ ಈ ಅವಧಿಯಲ್ಲಿ ನಾಸರವಾಡಿಗಾಗಲೀ, ಗುಲ್ಬರ್ಗಕ್ಕಾಗಲೀ ನಾನು ಹೋಗಿಲ್ಲ, ಅಲ್ಲಿಗೆ ನಾನು ರೇಡ್ ಗೆಂದು ಹೋಗಿಲ್ಲ, ಸಾಕ್ಷಿದಾರರು ಮುಂದುವರಿದು ಬೇರೆ ಇನ್ಸ್ ಪೆಕ್ಟರ್ಸ್ ರೇಡ್ ಮಾಡಿದ್ದು ಎಂದು ಹೇಳಿರುತ್ತಾರೆ. ಈ ಮೇಲೆ ಹೇಳಿದ ಈ ಎರಡೂ ಸ್ಥಳಗಳಲ್ಲಿ ರೇಡ್ ಮಾಡಿದಾಗ ಆರೋಪಿಯ ಸಂಬಂಧಿಕರು ಆ ಮನೆಗಳಲ್ಲಿ ಇರಲಿಲ್ಲ ಎನ್ನುವುದು ಸರಿಯಲ್ಲ.

71. ನೌಕರಿ ಖಾಯಂ ಆಗುವ ಪೂರ್ವದ ಅವಧಿಯಲ್ಲಿ ನೌಕರನು ಸಾಲವನ್ನು ಮಾಡಿದ್ದಲ್ಲಿ ಅದನ್ನು ಖರ್ಚಿನ ಪಟ್ಟಿಯಲ್ಲಿ ಸೇರಿಸಲು ಬರುವುದಿಲ್ಲ ಎನ್ನುವುದು ಸರಿ. ಈ ಸಾಲದ ಹಣವನ್ನು ಆದಾಯದ ಭಾಗದಲ್ಲಿ ತೋರಿಸಬೇಕು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ಸಾಲವನ್ನು ತೀರಿಸಲು ಉಪಯೋಗಿಸಿದ ಹಣದ ಬಗ್ಗೆ ಮಾತ್ರ ಅದು ಆದಾಯದ ಭಾಗ ಎಂದು ಪರಿಗಣಿಸಲಾಗುತ್ತದೆ, ಸಾಲದ ಹಣವನ್ನೇನು ಆದಾಯದ ಭಾಗ ಎಂದು ತೋರಿಸಲಾಗುವುದಿಲ್ಲ ಎಂದು ಹೇಳಿರುತ್ತಾರೆ.

72. ಮದುವೆ ಸಮಯದಲ್ಲಿ ಕುಟುಂಬದವರು ಬಿಟ್ಟು ಬೇರೆಯವರು ಸಂಬಂಧಿಕಾರು ಅಥವಾ ಇತರರು ಕಾಣಿಕೆಯಾಗಿ ನೀಡಿದ ಬಂಗಾರದ ಒಡವೆಗಳನ್ನು ಆಸ್ತಿ ಪಟ್ಟಿಯಲ್ಲಿ ಕಾಣಿಸಲು ಬರುವುದಿಲ್ಲ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ಯಾರು, ಯಾವಾಗ, ಎಷ್ಟು ಕೊಟ್ಟರು ಮತ್ತು ಅವುಗಳ ಬಗ್ಗೆ ರಸೀದಿ ಬೇಕಾಗುತ್ತದೆ, ಇವೆಲ್ಲವುಗಳ ಆಧಾರದ ಮೇಲೆ ಆಸ್ತಿ ಎಂದು ಪರಿಗಣನೆಗೆ ತೆಗೆದುಕೊಳ್ಳಲಾಗುತ್ತದೆ ಎಂದು ಹೇಳಿರುತ್ತಾರೆ.

73. ಆರೋಪಿಯ ಕುಟುಂಬದ ಸದಸ್ಯರನ್ನು ಹೊರತುಪಡಿಸಿ ಬೇರೆಯವರಿಗೆ ಸಂಬಂಧಪಟ್ಟ ವಾಹನವನ್ನಾಗಲೀ, ಖಾತೆಯಲ್ಲಿರುವ ಹಣವನ್ನಾಗಲೀ, ಯಾವುದೇ ತರಹದ ಆಸ್ತಿಯನ್ನಾಗಲೀ, ಖರ್ಚನ್ನಾಗಲೀ -ಇವುಗಳನ್ನು ಆದಾಯ ಪಟ್ಟಿಯಲ್ಲಾಗಲೀ, ಖರ್ಚಿನ ಪಟ್ಟಿಯಲ್ಲಾಗಲೀ, ಆಸ್ತಿ ಪಟ್ಟಿಯಲ್ಲಾಗಲೀ ಸೇರಿಸಲು ಬರುವುದಿಲ್ಲ ಎನ್ನುವುದು ಸರಿ.

74. ವೇತನದ ಬಗ್ಗೆ ಏನಾದರೂ ಕೈಬಿಟ್ಟಿದ್ದಲ್ಲಿ, ನಂತರ ವೇತನದ ಬಗ್ಗೆ ದಾಖಲೆಗಳನ್ನು ಪಡೆದ ಆ ದಾಖಲೆಗಳಿಗೆ ಸಂಬಂಧಪಟ್ಟಂತೆ ಇರುವ ವೇತವನ್ನು ಪರಿಗಣೆನೆಗೆ ತೆಗೆದುಕೊಳ್ಳಲಾಗುತ್ತದೆ ಎನ್ನುವುದು ಸರಿ. ನಿ.ಪಿ.103 ರ ಪ್ರಕಾರ ಆರೋಪಿಗೆ ಕೃಷಿಯಿಂದ ಬಂದ ಆದಾಯದಲ್ಲಿ ಖರ್ಚನ್ನು ಕಳೆದು ಉಳಿದ ಹಣ ರೂ.33,18,277/- ಎಂದು ಕಾಣಿಸಿದೆ ಎನ್ನುವುದು ಸರಿ.

75. ನೌಕರನಿಗೆ ಸೇರಿದ ಬಂಗಾರ, ಬೆಳ್ಳಿ ಸಾಮಾನುಗಳನ್ನು ಅಡ ಇಟ್ಟು ಬಂದ ಹಣವನ್ನಾಗಲೀ, ಮಾರಾಟ ಮಾಡಿ ಬಂದ ಹಣವನ್ನಾಗಲೀ, ಆದಾಯ ಪಟ್ಟಿಯಲ್ಲಿ ಸೇರಿಸಬೇಕು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ಸೇರಿಸಬೇಕು, ಆದರೆ ಇವು ನೌಕರನಿಗೆ ಸೇರಿದ್ದು ಎನ್ನುವ ಬಗ್ಗೆ ದಾಖಲೆಗಳೆಲ್ಲಾ ಬೇಕಾಗುತ್ತದೆ, ಅದರ ಆಧಾರದ ಮೇಲೆ ಅವರಿಗೆ ಸೇರಿದ್ದಲ್ಲಿ ಮಾತ್ರ ಆದಾಯ ಪಟ್ಟಿಯಲ್ಲಿ ಸೇರಿಸಲಾಗುತ್ತದೆ ಎಂದು ಹೇಳಿರುತ್ತಾರೆ.

76. ನೌಕರನು ಪಡೆದ insurance policy ಗಳನ್ನು surrender ಮಾಡಿ ಪಡೆದ ಹಣವನ್ನು ಆದಾಯ ಪಟ್ಟಿಗೆ ಸೇರಿಸಬೇಕು ಎನ್ನುವುದು ಸರಿ. ಚೆಕ್ ಅವಧಿ ನಂತರ ಕಟ್ಟಿದ Income tax ಹಣವನ್ನು ಖರ್ಚಿನ ಭಾಗದಲ್ಲಿ ಸೇರಿಸಲು ಬರುವುದಿಲ್ಲ ಎನ್ನುವುದು ಸರಿ. ನೌಕರಿ ಖಾಯಂ ಆಗುವ ಮೊದಲು ಇರುವ ಅವಧಿಯಲ್ಲಿ ವಾಹನವನ್ನು ನೊಂದಣಿ ಮಾಡಿಸಲು ತಗಲುವ ವೆಚ್ಚವನ್ನಾಗಲೀ ಅಥವಾ ಆಸ್ತಿಯನ್ನು ನೊಂದಣಿ ಮಾಡಲು ತಗುಲುವ ವೆಚ್ಚವನ್ನಾಗಲೀ ಈ ಖರ್ಚಿನ ಪಟ್ಟಿಯಲ್ಲಿ ಸೇರಿಸಲು ಬರುವುದಿಲ್ಲ ಎನ್ನುವುದು ಸರಿ.

77. ಮೂಡಿಗೆರೆಯಲ್ಲಿರುವ ಆರೋಪಿಯ ಮನೆ ಮೇಲೆ ರೇಡ್ ಮಾಡುವ ಮೊದಲು ಆರೋಪಿಗೆ ಸಂಬಂಧಪಟ್ಟ ಆಸ್ತಿಗಳ ಬಗ್ಗೆ ನೀವೇನಾದರೂ ತನಿಖೆ ಮಾಡಿದಿರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ಮೊದಲೇ ಮೇಲಿನ ಅಧಿಕಾರಿಗಳು ಆ ಬಗ್ಗೆ verify ಮಾಡಿ ಕಳುಹಿಸಿರುತ್ತಾರೆಂದು, ಅದರ ಆಧಾರದ ಮೇಲೆ ರೇಡ್ ಮಾಡಿರುತ್ತೇವೆ ಎಂದು ಹೇಳಿರುತ್ತಾರೆ. Source of report ನ್ನು ಪ್ರಾಸಾ-29-ಕೆ.ಟಿ. ಗುರುರಾಜ್ ಇವರು ಕೊಟ್ಟಿದ್ದು. Source report ಸರಿ ಇಲ್ಲ, ಅದು ನನ್ನ ಗಮನಕ್ಕೆ ಬಂದಿತ್ತು ಮತ್ತು ಅದು ಗೊತ್ತಿದ್ದೂ ಸಹಾ ಸುಳ್ಳು ಎಫ್.ಐ.ಆರ್.ನ್ನು ಮಾಡಿದೆನು ಎನ್ನುವುದು ಸರಿಯಲ್ಲ.

78. ಇನ್ಸ್ ಪೆಕ್ಟರ್ ಆದ ಪ್ರಾಸಾ-29-ಕೆ.ಟಿ.ಗುರುರಾಜ್, ತಿಮ್ಮರಾಯಪಾಟೀಲ್,

ಪ್ರಾಸಾ-28-ವಿನಯ್ ಇವರು ನನ್ನ ಮುಂದೆ ಮಹಜರನ್ನಾಗಲೀ, ಇತರೆ ದಾಖಲೆಗಳನ್ನಾಗಲೀ ಅವರು ರೇಡ್ ಮಾಡಿದ್ದಕ್ಕೆ ಸಂಬಂಧಪಟ್ಟಂತೆ, ನನ್ನ ಮುಂದೆ ಹಾಜರುಪಡಿಸಲೇ ಇಲ್ಲ ಎನ್ನುವುದು ಸರಿಯಲ್ಲ. ಮೂಡಿಗೆರೆ ಮನೆಯಲ್ಲಿ ಇದ್ದಂತಹ furniture ಗಳು ಆರೋಪಿಗೆ ಸಂಬಂಧಪಟ್ಟವುಗಳಲ್ಲ ಎಂದು ಗೊತ್ತಿದ್ದರೂ ಸಹಾ ಮಹಜರಿನಲ್ಲಿ ಕಾಣಿಸಿದ್ದೇನೆ, ಆ furnitures ಗಳೆಲ್ಲಾ ಇಲಾಖೆಗೆ ಸಂಬಂಧಪಟ್ಟವುಗಳು ಎನ್ನುವುದು ಸರಿಯಲ್ಲ.

79. ನಾನು ರೇಡ್ ಮಾಡಿದ ದಿನ ಮೂಡಿಗೆರೆ ಕ್ವಾಟ್ರಸ್ ನಲ್ಲಿ ಇದ್ದಂತಹ ಬಂಗಾರದ ಒಡವೆಗಳು ಕಾಣಿಕೆಯಾಗಿ ಬಂದಂತಹವುಗಳು ಎಂದು ಆರೋಪಿ ಹೇಳಿದರು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ಸರಿಯಲ್ಲ ಎಂದು, ಅವೆಲ್ಲಾ ಆರೋಪಿ ಮತ್ತು ಆರೋಪಿ ಕುಟುಂಬದ ಸದಸ್ಯರ ಮೈ ಮೇಲೆ ಇದ್ದಂತಹವುಗಳು ಎಂದು ಹೇಳಿರುತ್ತಾರೆ. ಬಂಗಾರದ ಆಭರಣಗಳ ಬಗ್ಗೆ ಉದ್ದೇಶಪೂರಕವಾಗಿ ಹೆಚ್ಚು ಮೊತ್ತವನ್ನು ಕಾಣಿಸಲಾಗಿದೆ ಎನ್ನುವುದು ಸರಿಯಲ್ಲ. ಆ ದಿನ ರೇಡ್‌ನಲ್ಲಿ ಮನೆಯಲ್ಲಿ ಸಿಕ್ಕಂತಹ ವಸ್ತುಗಳ ಬೆಲೆಯನ್ನು ಹೆಚ್ಚು ಮಾಡಿ ಮಹಜರಿನಲ್ಲಿ ಕಾಣಿಸಿದ್ದೇನೆ ಎನ್ನುವುದು ಸರಿಯಲ್ಲ. ಆ ದಿನ ಪಂಚರ ಸಮಕ್ಷಮ ಮಹಜರನ್ನು ಅಲ್ಲಿ ಮಾಡಿಯೇ ಇಲ್ಲ ಎನ್ನುವುದು ಸರಿಯಲ್ಲ.

80. ಮೂಡಿಗೆರೆಯ ಮನೆ ಮೇಲೆ ರೇಡ್ ಮಾಡಿದಾಗ ನೌಕರ ಕೆಲಸ ಮಾಡುತ್ತಿದ್ದ ಇಲಾಖೆಗೆ ಸಂಬಂಧಪಟ್ಟ ಮ್ಯಾನೇಜರ್ ಸ್ಥಳದಲ್ಲಿ ಇದ್ದರು ಅವರ ಹೇಳಿಕೆಯನ್ನು ಪಡೆದಿದ್ದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ನಾನೇನು ಹೇಳಿಕೆಯನ್ನು ಪಡೆದಿಲ್ಲ ಎಂದು ಹೇಳಿರುತ್ತಾರೆ. ಇನ್ಸ್ ಪೆಕ್ಟರ್ ವಿನಯ್ ನನಗೆ ಫೋನ್ ಮಾಡಿ ಹೇಳಿದಾಗ, ಆರೋಪಿಯನ್ನು ಕೇಳಿದಾಗ, ಫ್ಲ್ಯಾಟ್ ಕೀ ನನ್ನ ಬಳಿ ಇದೆ ಎಂದು ಆರೋಪಿ ನನಗೆ ಹೇಳಿಯೇ ಇಲ್ಲ ಎನ್ನುವುದು ಸರಿಯಲ್ಲ. ಆ ದಿನ ಆರೋಪಿಯ ಬಳಿ ರೂ.41,140/-ಗಳು ಇರಲೇ ಇಲ್ಲ, ಅದನ್ನು ಆರೋಪಿಗೆ ಮರಳಿ ನೀಡಿದ ಬಗ್ಗೆ ನಿ.ಪಿ.82 ರ ಸ್ವೀಕೃತಿ ಪತ್ರವನ್ನು ಈ ಕೇಸಿನ ಸಲುವಾಗಿ ಸೃಷ್ಟಿ ಮಾಡಲಾಗಿದೆ, ಬಲವಂತವಾಗಿ ಆರೋಪಿಯ ಸಹಿಯನ್ನು ಪಡೆಯಲಾಗಿದೆ ಎನ್ನುವುದು ಸರಿಯಲ್ಲ.

81. ಇನ್ಸ್ ಪೆಕ್ಟರ್ ಆದ ಪ್ರಾಸಾ-29-ಕೆ.ಟಿ.ಗುರುರಾಜ್, ತಿಮ್ಮರಾಯಪಾಟೀಲ್, ಮತ್ತು ಪ್ರಾಸಾ-28-ವಿನಯ್ ಇವರು ಹಾಜರುಪಡಿಸಿದರು ಎಂದು ಹೇಳಲಾದ ಮಹಜರ್

ಮತ್ತು ದಾಖಲೆಗಳನ್ನು ನಮ್ಮ ಕಛೇರಿಯಲ್ಲಿಯೇ ಕುಳಿತು ಸುಷ್ಟಿ ಮಾಡಲಾಗಿದೆ, ಹೆಚ್ಚಿನ ಬೆಲೆಯನ್ನು ಉದ್ದೇಶಪೂರಕವಾಗಿ ತೋರಿಸಲಾಗಿದೆ ಎನ್ನುವುದು ಸರಿಯಲ್ಲ. ನಿ.ಪಿ.12 ರ ಪ್ರಕಾರ ಆಳಂದದ ತಹಸಿಲ್ದಾರ್ ಅವರ ಮೇಲೆ ಪ್ರಭಾವ ಬೀರಿ ಆ ರೀತಿ ಪಡೆದಿದ್ದೇವೆ ಎನ್ನುವುದು ಸರಿಯಲ್ಲ.

82. ನಿ.ಪಿ.18 ಮತ್ತು 19 ರಲ್ಲಿ ಕಾಣಿಸಿರುವ ಕೆಲವು ಆಸ್ತಿಗಳನ್ನು ಒಂದಕ್ಕಿಂತ ಹೆಚ್ಚು ಬಾರಿ ತೋರಿಸಲಾಗಿದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ತಹಸಿಲ್ದಾರ್ ಅವರು ಅದರಲ್ಲಿ ಆ ರೀತಿ ಕಾಣಿಸಿದ್ದಾರೆಂದು, ಈ ಬಗ್ಗೆ ಒಂದಕ್ಕಿಂತ ಹೆಚ್ಚು ತೋರಿಸಿರುವ ಬಗ್ಗೆ ಮಾರ್ಕ್ ಸಹಾ ಮಾಡಿದ್ದಾರೆ ಎಂದು ಹೇಳಿರುತ್ತಾರೆ. ಈ ರೀತಿ ಎರಡು ಬಾರಿ ಆಸ್ತಿ ಪಟ್ಟಿಯಲ್ಲಿ ತೋರಿಸಲು ಬರುವುದಿಲ್ಲ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ಆಸ್ತಿ ಪಟ್ಟಿಯಲ್ಲೇನು ಒಂದೇ ಆಸ್ತಿಯನ್ನು ಒಂದಕ್ಕಿಂತ ಹೆಚ್ಚು ಬಾರಿ ಕಾಣಿಸಿಲ್ಲ ಎಂದು ಹೇಳಿರುತ್ತಾರೆ.

83. ಸ್ಟ್ಯಾಂಪ್ ಡ್ಯೂಟಿ, ರಿಜಿಸ್ಟ್ರೇಷನ್ ಶುಲ್ಕ ಮತ್ತು ಸ್ಕ್ಯಾನಿಂಗ್ ಶುಲ್ಕಗಳ ದಾಖಲೆಗಳಲ್ಲಿ ಆರೋಪಿಯ ಹೆಸರು ಇಲ್ಲ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ದಾಖಲೆಯನ್ನು ನೋಡಿ ಸಂಬಂಧಪಟ್ಟ ಆಸ್ತಿಯ ಸರ್ವೆ ನಂಬರನ್ನು ಅದರಲ್ಲಿ ಕಾಣಿಸಲಾಗಿದೆ ಎಂದು, ಆರೋಪಿ ಹೆಸರು ಏನೂ ಇಲ್ಲ ಎಂದು ಹೇಳಿರುತ್ತಾರೆ. ಈ ಆಸ್ತಿಗಳು ಆರೋಪಿಗೆ ಸಂಬಂಧಪಟ್ಟವುಗಳಲ್ಲ ಎನ್ನುವುದು ಸರಿಯಲ್ಲ. ನಿ.ಪಿ.20 ರಲ್ಲಿ ಕಾಣಿಸಿರುವ ಆಸ್ತಿಗಳು ಆರೋಪಿಯ ಹೆಸರಿನಲ್ಲಾಗಲೀ, ಅಥವಾ ಆರೋಪಿಯ ಪತ್ನಿ, ಮಗ ಮತ್ತು ಮಗಳ ಹೆಸರಿನಲ್ಲಾಗಲೀ ಇಲ್ಲ ಎನ್ನುವುದು ಸರಿಯಲ್ಲ.

84. ನಿ.ಪಿ.86 ರಲ್ಲಿ ಆರೋಪಿಯ ಹೆಸರಾಗಲೀ, ಅಥವಾ ಅವರ ಪತ್ನಿ, ಮಗ, ಮಗಳ ಹೆಸರಾಗಲೀ ಇಲ್ಲ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ಈ ಆಸ್ತಿಯು ಆರೋಪಿಯ ಮನೆಯಲ್ಲಿ ಇದ್ದ ಹುಡುಗನ ಹೆಸರಿನಲ್ಲಿ ಇರುತ್ತದೆ ಎಂದು, ಆ ಹುಡುಗ ಆರೋಪಿಯ ಸಂಬಂಧಿಕರ ಮಗ ಎಂದು, ಆ ಹುಡುಗನನ್ನು ಇವರೇ ಸಾಕುತ್ತಿದ್ದರು ಎಂದು ಕಂಡು ಬಂದಿತು ಎಂದು ಹೇಳಿರುತ್ತಾರೆ. ಆ ಹುಡುಗನನ್ನು ಆರೋಪಿ ಸಾಕಿಲ್ಲ, ಆರೋಪಿಗೆ ಆ ಹುಡುಗ ಯಾವುದೇ ರೀತಿಯ ಸಂಬಂಧ ಇಲ್ಲ ಎನ್ನುವುದು ಸರಿಯಲ್ಲ, ಸಾಕ್ಷಿದಾರರು ಮುಂದುವರಿದು ಆ ಹುಡುಗನಿಗೆ ಆ ಆಸ್ತಿಯನ್ನು ಖರೀದಿ ಮಾಡುವ

ಆರ್ಥಿಕ ಸಾಮರ್ಥ್ಯ ಇಲ್ಲ, ಆತನ ತಂದೆ ತಾಯಿಗೂ ಸಹಾ ಆರ್ಥಿಕ ಸಾಮರ್ಥ್ಯ ಇಲ್ಲ ಎಂದು ಹೇಳಿರುತ್ತಾರೆ. ಈ ಬಗ್ಗೆ ಅವರ ಹೇಳಿಕೆಯನ್ನು ದಾಖಲು ಮಾಡಿಕೊಂಡಿರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ನಾನು ಮಾಡಿಲ್ಲ, ನನ್ನ ನಂತರದ ತನಿಖಾಧಿಕಾರಿ ಮಾಡಿರಬಹುದೇನೊ ಎಂದು ಹೇಳಿರುತ್ತಾರೆ. ಆ ಹುಡುಗನಿಗಾಲೀ, ಆ ಹುಡುಗನ ತಂದೆ, ತಾಯಿಗಾಗಲೀ ಆಸ್ತಿ ಖರೀದಿಸಲು ಆರ್ಥಿಕ ಸಾಮರ್ಥ್ಯ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

(ಈ ಹಂತದಲ್ಲಿ ನ್ಯಾಯಾಲಯದ ಬೆಳಗಿನ ಅವಧಿ ಮುಗಿದ ಕಾರಣ, ಮುಂದಿನ ಪಾಟೀ ಸವಾಲನ್ನು ಮುಂದೂಡಲಾಗಿದೆ)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ.ಸ.ಇ.ಎ.ಒ.

Sd/-04-08-2023
(ಶುಭ ಗೌಡರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿ ಸಹಿಃ-

ಚ

Visit **ecourts.gov.in** for updates or download mobile app “**eCourts Services**” from Android or iOS